ಕನ್ನಡಪ್ರಭ
ಬುಧವಾರ 6.05.2026

ಗರಿಷ್ಠ 39° c | ಕನಿಷ್ಠ 23° c

ಸುದ್ದಿ ಸಿಂಚನ

ಡಿಪ್ಲೋಮಾ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬಾಗಲಕೋಟೆ: ಕೂಡಲಸಂಗಮ ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಿಂದ ಎಸ್.ಎಸ್.ಎಲ್.ಸಿ ಪಾಸಾದ ವಿದ್ಯಾರ್ಥಿಗಳಿಂದ ಮೂರು ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಟೂಲ್ ಅಂಡ್ ಡೈ ಮೇಕಿಂಗ್, ಮೆಕಟ್ರಾನಿಕ್ಸ್, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಕೋರ್ಸ್‌ಗಳಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನ ಮೇ 10 ಆಗಿದೆ. ಈ ಕೋರ್ಸ್‌ಗಳು 3+1 ವರ್ಷದ ಅವಧಿಯದಾಗಿದ್ದು, ನಾಲ್ಕನೇ ವರ್ಷದಲ್ಲಿ ಪ್ರತಿಷ್ಠಿತ ಕಂಪನಿಗಳಲ್ಲಿ ಕಡ್ಡಾಯವಾಗಿ ಒಂದು ವರ್ಷದ ತರಬೇತಿಗೆ ಕಳುಹಿಸಲಾಗುತ್ತದೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಇನ್ನಿತರ ಸೌಲಭ್ಯಗಳ ಜೊತೆಗೆ ಆಕರ್ಷಕ ಸ್ಟೈಪೆಂಡ್ ಕೂಡ ನೀಡಲಾಗುತ್ತದೆ. ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಹಾಗೂ ಪಾಲಕರು ಅಗತ್ಯ ದಾಖಲೆಗಳೊಂದಿಗೆ ಕೇಂದ್ರಕ್ಕೆ ಭೇಟಿ ನೀಡಿ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಐಟಿಐ ಮತ್ತು ಪಿಯುಸಿ (ವಿಜ್ಞಾನ) ತೇರ್ಗಡೆಯಾದ ವಿದ್ಯಾರ್ಥಿಗಳು 2ನೇ ವರ್ಷಕ್ಕೆ ನೇರ ಪ್ರವೇಶ ಪಡೆಯಬಹುದಾಗಿದೆ ಎಂದು ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬಾಗಲಕೋಟೆ: ಪ್ರಸಕ್ತ 2026-27ನೇ ಸಾಲಿನ ಬೀಳಗಿ ಎಸ್.ಆರ್. ನಿರಾಣಿ ಸರಕಾರಿ ಪಾಲಿಟೆಕ್ನಿಕ್ ಕಾಲೇಜಿನ ಡಿಪ್ಲೊಮಾ ಪ್ರವೇಶ ಕೋರ್ಸ್‌ಗಳಿಗೆ ಮೆರಿಟ್ ಹಾಗೂ ರೋಷ್ಟರ್ ಅನುಗುಣವಾಗಿ ಆಫ್ಲೈನ್ ಪ್ರವೇಶ ಅವಧಿ ವಿಸ್ತರಿಸಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಸಿವಿಲ್ ಎಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ -ಕಮ್ಯೂನಿಕೇಶನ್, ಮೆಕ್ಯಾನಿಕಲ್ ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಹೀಗೆ ಒಟ್ಟು 6 ಕೋರ್ಸ್‌ಗಳಿದ್ದು, ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಕನಿಷ್ಠ ಶೇ.35ರಷ್ಟು ಅಂಕ ಪಡೆದು ಉತ್ತೀರ್ಣರಾದವರಿಗೆ ಮೆರಿಟ್ ಹಾಗೂ ರೋಸ್ಟರ್ ಅನುಗುಣವಾಗಿ ಆಫ್ಲೈನ್ ಮೂಲಕ ಪ್ರವೇಶ ನೀಡಲಾಗುತ್ತದೆ. ಮಾಹಿತಿಗಾಗಿ ಮೊನಂ. 9980230949, 8123326842, 7795489203ಗೆ ಸಂಪರ್ಕಿಸುವಂತೆ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಚಾರ್ಯರಾದ ಗೌಸ್ ಎಂ.ಸಾಲವತಿ ತಿಳಿಸಿದ್ದಾರೆ.

ರಾಜ್ಯ ಅಂಗವಿಕಲರ ಒಕ್ಕೂಟ ಪದಾಧಿಕಾರಿ ಆಯ್ಕೆ



ಇಳಕಲ್ಲ: ಕರ್ನಾಟಕ ಅಂಗವಿಕಲರ ರಾಜ್ಯ ಒಕ್ಕೂಟದ ಇಳಕಲ್ಲ ತಾಲೂಕು ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಮಹಾಂತೇಶ ಕಲ್ಯಾಣಕರ, ಉಪಾಧ್ಯಕ್ಷರಾಗಿ ಅನಸೂಯಾ ಐಲಿ, ಕಾರ್ಯದರ್ಶಿಯಾಗಿ ದಾದೇಪೀರ್ ಆದವಾನಿ, ಸಹಕಾರ್ಯರ್ಶಿಯಾಗಿ ಅಬ್ದುಲ್ ರಜಾಕ್ ಕಡಿವಾಲ ಅವರನ್ನು ಆಯ್ಕೆ ಮಾಡಿ ಸನ್ಮಾನಿಸಲಾಯಿತು. ಉದಯವಾಣಿ ಬಾವೂರ, ರಾಮಚಂದ್ರ ದಲಾಲಕರ, ಗಣೇಶ ಮಡಿವಾಳರ, ಸಂಜೀವಪ್ಪ ರಾಮಕೋಟಿ, ದೇವಪ್ಪ ಗುಳೇದ, ಚಂದ್ರಕಲಾ ಸುಣಗಾರ, ಮಹಾಂತೇಶ ಹುನಕುಂಟಿ ಸಾಮಾನ್ಯ ಸದಸ್ಯರಾಗಿ ಆಯ್ಕೆಯಾದರು.

ಜಲಾಶಯ ಮಟ್ಟ

ಆಲಮಟ್ಟಿ

- ಗರಿಷ್ಠ ಮಟ್ಟ..................519.60ಮೀ.
- ಇಂದಿನ ಮಟ್ಟ...............509.59ಮೀ.
- ಒಳಹರಿವು.....................ಇಲ್ಲ
- ಹೊರಹರಿವು...................3,727ಕ್ಯು

ಘಟಪ್ರಭಾ

- ಗರಿಷ್ಠ ಮಟ್ಟ................2175.00ಮೀ.
- ಇಂದಿನ ಮಟ್ಟ.............2110.883ಮೀ.
- ಒಳಹರಿವು.....................ಇಲ್ಲ
- ಹೊರಹರಿವು...................142ಕ್ಯು

ಶೂನ್ಯ ನೆರಳು ದಿನ ಕಾರ್ಯಕ್ರಮ



ಶೂನ್ಯ ನೆರಳು ದಿನದ ಕಾರ್ಯಕ್ರಮವನ್ನು ಬ್ರಿಲಿಯಂಟ್ ಅಕಾಡೆಮಿಯ ಕಾರ್ಯದರ್ಶಿ ಆನಂದ ರಾಠೋಡ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಬ್ರಿಲಿಯಂಟ್ ಅಕಾಡೆಮಿ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡ ಶೂನ್ಯ ನೆರಳು ದಿನದ ಕಾರ್ಯಕ್ರಮವನ್ನು ಬ್ರಿಲಿಯಂಟ್ ಅಕಾಡೆಮಿಯ ಕಾರ್ಯದರ್ಶಿ ಆನಂದ ರಾಠೋಡ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಆನಂದ ರಾಠೋಡ ಅವರು, ಶೂನ್ಯ ನೆರಳಿನ ದಿನದ ಬಗ್ಗೆ ಸಂಪನ್ಮೂಲ ವ್ಯಕ್ತಿಗಳು ತಿಳಿಸುವ ಮಾಹಿತಿಯನ್ನು ವಿದ್ಯಾರ್ಥಿಗಳು ವಿವರವಾಗಿ ತಿಳಿದುಕೊಂಡು ಖಗೋಳ ವಿಜ್ಞಾನದಲ್ಲಿ ಆಸಕ್ತಿ ಹೆಚ್ಚಿಸಿಕೊಳ್ಳಬೇಕೆಂದು ಕರೆ ನೀಡಿದರು. ಕಾರ್ಯಕ್ರಮದ ತಮ್ಮ ವಿದ್ಯಾ ಸಂಸ್ಥೆ ಆಯ್ಕೆ ಮಾಡಿಕೊಂಡಿದ್ದಕ್ಕಾಗಿ ಕೇಂದ್ರದ ಸಿಬ್ಬಂದಿಗೆ ಧನ್ಯವಾದ ಸಲ್ಲಿಸಿದರು.

ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ವಿಜಯಕುಮಾರ ಕೆ, ವಿಜ್ಞಾನ ಶಿಕ್ಷಕರು, ಶಂಕ್ರಪ್ಪ ಸಕ್ರಿ ಪ್ರೌಢಶಾಲೆ, ಬಾಗಲಕೋಟೆ ಅವರು ಮಾತನಾಡಿ, ಶೂನ್ಯ ನೆರಳಿನ ದಿನದ ಸ್ವಾರಸ್ಯಕರ ಮಾಹಿತಿಗಳನ್ನು ವಿವರವಾಗಿ ತಿಳಿಸಿದರು. ಅದರಂತೆ, ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದಂತೆ ವಿವಿಧ ಆಕಾಶ ಕಾಯಗಳು, ನಕ್ಷತ್ರ ಪುಂಜಗಳ ಅಧ್ಯಯನ ಬಗ್ಗೆ ಅರ್ಥೈಹಿಸಿದರು. ಕಾರ್ಯಕ್ರಮದಲ್ಲಿ ಒಟ್ಟು 64 ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸೂರ್ಯನ ಚಲನೆಯನ್ನು ವಿಶೇಷಸೂರ್ಯ ಮಸೂರಗಳನ್ನು ಬಳಸಿಕೊಂಡು ನೋಡಲಾಯಿತು. ಮಧ್ಯಾಹ್ನ 12.24 ಗಂಟೆಗೆ ಸೂರ್ಯನ ಕಿರಣಗಳು ಲಂಬವಾಗಿ ಬೀಳುವ ಮೂಲಕ ಸಂಭವಿಸಿದ ಶೂನ್ಯ ನೆರಳನ್ನು ಪ್ರಾಯೋಗಿಕ ಚಟುವಟಿಕೆಯ ಮೂಲಕ ವಿದ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ತಿಳಿಸಿಕೊಡಲಾಯಿತು.

ದುಶ್ಚಟಗಳ ಭಿಕ್ಷೆ, ಸದ್ಗುಣಗಳ ದೀಕ್ಷೆ ಕಾರ್ಯಕ್ರಮ

ಸಾವಳಗಿ: ದುಶ್ಚಟಗಳ ಭಿಕ್ಷೆ, ಸದ್ಗುಣಗಳ ದೀಕ್ಷೆ ಕಾರ್ಯಕ್ರಮವನ್ನು ಮೇ.6 ರಿಂದ 14 ರವರೆಗೆ 9 ದಿನಗಳ ಕಾಲ ಸಾವಳಗಿ ಗ್ರಾಮದಲ್ಲಿ ವ್ಯಸನಮುಕ್ತ ಗ್ರಾಮಗಳ ಸಂಕಲ್ಪ, ಜನ ಜಾಗೃತಿ ಯಾತ್ರೆ ನಡೆಯಲಿದೆ. 9 ದಿನಗಳ ಕಾಲ ದುಶ್ಚಟಗಳ ಭಿಕ್ಷೆ, ಸದ್ಗುಣಗಳ ದೀಕ್ಷೆ, ವ್ಯಸನ ಮುಕ್ತ ಗ್ರಾಮಗಳ ಸಂಕಲ್ಪ, ಜನ ಜಾಗೃತಿ ಯಾತ್ರೆ ಕಾರ್ಯಕ್ರಮದ ನೇತೃತ್ವವನ್ನು ಜಮಖಂಡಿಯ ಓಲೆಮಠದ ಆನಂದ ದೇವರು ನಡೆಸಿಕೊಡುವವರು. ಸಾವಳಗಿ ಗ್ರಾಮವನ್ನು ವ್ಯಸನ ಮುಕ್ತ ಗ್ರಾಮವನ್ನಾಗಿ ಮಾಡುವುದು, ಸಮಾಜದಲ್ಲಿ ಎಲ್ಲರೊಂದಿಗೆ ಉತ್ತಮವಾಗಿ ಜೀವನ ನಡೆಸಬೇಕು ಎಂಬುವುದೇ ಕಾರ್ಯಕ್ರಮದ ಉದ್ದೇಶವಾಗಿದೆ. ದುಶ್ಚಚಟಗಳಿಂದ ಎಲ್ಲರೂ ಸಂಸಾರ ಹಾಳು ಮಾಡುವುದು ಹಾಗೂ ಇನ್ನಿತರ ಚಟುವಟಿಕೆಗಳಲ್ಲಿ ತೊಡಗುತ್ತಾರೆ. ಎಲ್ಲವನ್ನು ಬಿಟ್ಟು ಉತ್ತಮ ಜೀವನ ನಡೆಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. 9 ದಿನಗಳ ಕಾಲ ಪ್ರತಿದಿನ ಸಂಜೆ 7ಕ್ಕೆ ಓಲೆಮಠದ ಆನಂದ ದೇವರಿಂದ ಪ್ರವಚನ ಕಾರ್ಯಕ್ರಮ, ಸಂಜೆ 9 ಗಂಟೆಗೆ ಅನ್ನ ಪ್ರಸಾದ ವ್ಯವಸ್ಥೆ ಇರಲಿದೆ.

ರಾಜ್ಯ ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲವಿಲ್ಲ

ಉಪ ಚುನಾವಣೆಯಲ್ಲಿ ನಿರೀಕ್ಷಿತ ಫಲಿತಾಂಶ: ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ

• **ಕನ್ನಡಪ್ರಭ ವಾರ್ತೆ** ಜಮಖಂಡಿ

ರಾಜ್ಯ ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲವಿಲ್ಲ. ಕಾಂಗ್ರೆಸ್ ಇರುವುದು ಅಧಿಕಾರಕ್ಕಲ್ಲ ಜನರ ಸೇವೆಗೆ. ಇದು ಸೇವಾಪಕ್ಷ ಎಂದು ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಹೇಳಿದರು.

ಮಂಗಳವಾರ ನಗರಕ್ಕೆ ಭೇಟಿ ನೀಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ನಿರೀಕ್ಷಿತ ಉಪ ಚುನಾವಣೆಗಳ ಫಲಿತಾಂಶ ಬಂದಿವೆ. ಇದರಿಂದ ರಾಜ್ಯ ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲ ಸೃಷ್ಟಿಯಾಗುವುದಿಲ್ಲ. ಮೂರು ವರ್ಷಗಳ ಕಾಲ ನುಡಿದಂತೆ ನಡೆದು ಜನಪರ ಆಡಳಿತ ನೀಡಿದ್ದೇವೆ. ಉಳಿದ ಇನ್ನೆರಡು ವರ್ಷಗಳ ಆಡಳಿತ ಅವಧಿಯಲ್ಲಿ ರಾಜ್ಯದ ಜನಹಿತದ ದೃಷ್ಟಿಯನ್ನಿಟ್ಟುಕೊಂಡು ಕೆಲಸ ಮಾಡುತ್ತೇವೆ. ಬಡವರೂ ಸೇರಿದಂತೆ ಜಾತ್ಯತೀತವಾಗಿ ಎಲ್ಲರಿಗೂ ಶಕ್ತಿ ತುಂಬುವ ಕೆಲಸ ಮಾಡುತ್ತೇವೆ. ಪಕ್ಷದ ವರಿಷ್ಠರಸೂಚನೆಯಂತೆಎಲ್ಲನಾಯಕರುನಡೆದುಕೊಳ್ಳುತ್ತಾರೆ. ಅಧಿಕಾರಕ್ಕಾಗಿ ಅಭಿಪ್ರಾಯ ಬೇಧವಿಲ್ಲ. ಶಾಸಕರು ತಂಡೋಪತಂಡವಾಗಿ ದೆಹಲಿ ಪ್ರವಾಸದ ಕುರಿತು ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ ಎಂದು ಸ್ಪಷ್ಟಪಡಿಸಿದರು.

ಜನಪರ ಆಡಳಿತಕ್ಕೆ ಮತ: ಬಾಗಲಕೋಟೆ ಹಾಗೂ ದಾವಣಗೆರೆಯ ಮತದಾರರು ಜನಪರ ಆಡಳಿತಕ್ಕೆ ಮತ ನೀಡಿದ್ದಾರೆ. ಎಲ್ಲ ಸಮಾಜದವರ ಬೆಂಬಲ ಕಾರ್ಯಕರ್ತರ ಶ್ರಮದಿಂದ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಪಕ್ಷದ ಸಿದ್ಧಾಂತ ಮತ್ತು ಸರ್ಕಾರದ ಸಾಧನೆಗೆ ದೊರೆತ ಜಯವಾಗಿದೆ. ಕಾಂಗ್ರೆಸ್ ಗೆಲುವಿನ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಎಲ್ಲ ಮುಖಂಡರ ಶ್ರಮವಿದೆ. ಮುಂಬರುವ 2028ರ ಚುನಾವಣೆಗಳಿಗೆ ಉಪ ಚುನಾವಣೆ ಫಲಿತಾಂಶಗಳು ಕಾಂಗ್ರೆಸ್ ಗೆಲುವಿನ ಸಂದೇಶ ನೀಡಿವೆ ಎಂದು ಹೇಳಿದರು.

ಪಂಚರಾಜ್ಯಗಳ ಚುನಾವಣೆ: ಕೇರಳದ ಪ್ರಜ್ಞಾವಂತ ಮತದಾರರು ಯುಡಿಎಫ್‌ಗೆ 89 ಸ್ಥಾನ ಗೆಲ್ಲಿಸಿಕೊಟ್ಟಿದ್ದಾರೆ. ತಮಿಳುನಾಡಿನ ಜನ ಟಿವಿಕೆಗೆ ಮನ್ನಣೆ ನೀಡಿದ್ದು, ಜನರು ಬದಲಾವಣೆ ಬಯಸಿದ್ದಾರೆ. ಪಶ್ಚಿಮ ಬಂಗಾಳ, ಪುದುಚೇರಿ, ಅಸ್ಸಾಂ ಫಲಿತಾಂಶಗಳನ್ನು ನೋಡಿದ್ದೇವೆ. ಚುನಾವಣೆಗಳು ಪಾರದರ್ಶಕವಾಗಿ ನಡೆಯಬೇಕು. ಚುನಾವಣೆ ಆಯೋಗ, ಇಡಿ, ಐಟಿ ಮುಂತಾದ ಸಂಸ್ಥೆಗಳು ಸಂವಿಧಾನ ಬದ್ಧವಾಗಿ ನಡೆಯಬೇಕು. ಕಾಂಗ್ರೆಸ್ ಮುಖಂಡರ ಮೇಲೆ ಇಡಿ ದಾಳಿಗಳಾಗುತ್ತವೆ ಎಂದ ಅವರು, ಬಿಜೆಪಿ ಸೇರಿದರೆ ಕ್ಲೀನ್ ಚಿಟ್ ನೀಡಲಾಗುತ್ತಿದೆ. ಇದ್ಯಾವ ನ್ಯಾಯ? ಪಾರದರ್ಶಕತೆ ಇಲ್ಲದಂತಾಗಿದೆ. ಆಮ್ ಆದ್ಮಿ ಪಕ್ಷದ 7 ಜನ ರಾಜ್ಯಸಭಾ ಸದಸ್ಯರು ಬಿಜೆಪಿ ಸೇರಿದ್ದು, ಎಎಪಿಯ ಶಾಸಕರಿಗೆ ಮಾಡಿದ ದ್ರೋಹ ಅಲ್ಲವೇ ಎಂದು ಪ್ರಶ್ನಿಸಿದರು.



ಪಶ್ಚಿಮ ಬಂಗಾಳದಲ್ಲಿ 27 ಲಕ್ಷ ಜನ ಮತದಾರರನ್ನು ಎಸ್ಐಆರ್ ನೆಪದಲ್ಲಿ ಪಟ್ಟಿಯಿಂದ ಕೈಬಿಡಲಾಗಿದೆ. ನುಸುಳುಕೋರರು ಎಂದು ಹೇಳುತ್ತಿರುವುದು ಕೇಂದ್ರ ಸರ್ಕಾರದ ವೈಫಲ್ಯವಲ್ಲವೇ, ಪೆಹಲ್ಗಾಮ್ ದಾಳಿ, ಕಾಶ್ಮೀರದ ದಾಳಿಗಳು ಭದ್ರತಾ ವ್ಯವಸ್ಥೆಯ ವೈಫಲ್ಯವಾಗಿದೆ. ಲಕ್ಷಾಂತರ ಮತದಾರರ ಹಕ್ಕು ಕಸಿದುಕೊಳ್ಳಲಾಗಿದೆ. ಇದಕ್ಕೆಲ್ಲ ಸಮಯ ಬಂದಾಗ ಉತ್ತರ ದೊರೆಯುತ್ತದೆ ಎಂದರು.

ಜಮಖಂಡಿ ಕ್ಷೇತ್ರದೊಂದಿಗೆ ಅವಿನಾಭಾವ ಸಂಬಂಧ; ಜಮಖಂಡಿ ಕ್ಷೇತ್ರಕ್ಕೂತಮಗೂ ಅವಿನಾಭಾವ ಸಂಬಂಧವಿದೆ. ಹಿಂದಿನ ಶಾಸಕರಾಗಿದ್ದ ದಿ.ಸಿದ್ದು ನ್ಯಾಮಗೌಡರು ಕ್ಷೇತ್ರದ ಅಭಿವೃದ್ಧಿಗೆ ಅಮೋಘ ಕೊಡುಗೆ ನೀಡಿದ್ದಾರೆ. ನಂತರದ ಚುನಾವಣೆಗಳಲ್ಲಿ ನನ್ನ ನೇತೃತ್ವವಿತ್ತು. ಪ್ರತಿ ಹಳ್ಳಿಗಳಿಗೆ ಭೇಟಿ ನೀಡಿದ್ದೇನೆ. ಇಲ್ಲಿಯ ಜನರ ಸುಖ ದುಃಖದಲ್ಲಿ ಭಾಗಿಯಾಗಿದ್ದೇನೆ ಎಂದು ಹೇಳಿದರು. ಅರಣ್ಯ ಇಲಾಖೆಯ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಲು ನಗರಕ್ಕೆ ಭೇಟಿ ನೀಡಿದ್ದಾಗಿ ತಿಳಿಸಿದ ಸಚಿವ ಈಶ್ವರ ಖಂಡ್ರೆ, ಶರಣ ಚೇತನ ಬ್ಯಾಂಕ್, ಕಟ್ಟೆಕೆರೆ ಉದ್ಯಾನಕ್ಕೆ ಭೇಟಿ ನೀಡಿದ್ದರು. ನೂತನವಾಗಿ ನಿರ್ಮಿಸಲಾದ ಜಿರಲಿ ಆಯುರ್ವೇದ ಆಸ್ಪತ್ರೆಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಾಜಿ ಶಾಸಕ ಆನಂದ ನ್ಯಾಮಗೌಡ, ಮುಖಂಡರಾದ ಶ್ರೀಶೈಲ ದಳವಾಯಿ, ಮಹೇಶ ಕೋಳಿ ಸೇರಿದಂತೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಇದ್ದರು.

ಉಪಚುನಾವಣೆ ಫಲಿತಾಂಶ 2028ರ ಚುನಾವಣೆಗೆ ದಿಕ್ಸೂಚಿ

ಕಾಂಗ್ರೆಸ್ ಕಾರ್ಯಕರ್ತರಿಂದ ಸನ್ಮಾನ ಸ್ವೀಕರಿಸಿದ ಈಶ್ವರ ಖಂಡ್ರೆ ಅಭಿಮತ

• **ಕನ್ನಡಪ್ರಭ ವಾರ್ತೆ** ಲೋಕಾಪುರ

ಸಿಎಂ ಸಿದ್ದರಾಮಯ್ಯ ಅವರ ಉತ್ತಮ ಆಡಳಿತ, ಅಭಿವೃದ್ಧಿಗೆ ಜನತೆ ಮನ್ನಣೆ ನೀಡಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಮತದಾರರು ಹೆಚ್ಚಿನ ಒಲವು ನೀಡುತ್ತಿದ್ದಾರೆ. ಈ ಉಪಚುನಾವಣೆ ಫಲಿತಾಂಶ ಮುಂದಿನ 2028ರ ಚುನಾವಣೆಗೆ ದಿಕ್ಸೂಚಿಯಾಗಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು.

ಪಟ್ಟಣದ ಕಾಂಗ್ರೆಸ್ ಮುಖಂಡ ಗುರುರಾಜ ಉದಪುಡಿ ನಿವಾಸದಲ್ಲಿ ಕಾರ್ಯಕರ್ತರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿ, ಬಾಗಲಕೋಟೆ ಮತ್ತು ದಾವಣಗೆರೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಅಭೂತಪೂರ್ವ ಗೆಲುವಿಗೆ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಮತ್ತು ಎಲ್ಲ ಕಾಂಗ್ರೆಸ್ ಶಾಸಕರ, ಮುಖಂಡರ, ಕಾರ್ಯಕರ್ತರ ಅವಿರತ ಪ್ರಯತ್ನದಿಂದಾಗಿ ಕಾಂಗ್ರೆಸ್ ಪಕ್ಷ ಗೆಲ್ಲಿಸಿದ್ದಕ್ಕೆ ಮತದಾರರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಕರ್ನಾಟಕ ಜನತೆಗೆ ನೀಡಿದ ಪಂಚ ಗ್ಯಾರಂಟಿ ಯೋಜನೆಗಳು ಉಪಚುನಾವಣೆಯಲ್ಲಿ ಹೆಚ್ಚಿನ ಪ್ರಭಾವ ಬೀರಿವೆ. ಕರ್ನಾಟಕ ಜನತೆ ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಆರ್ಶಿರ್ವಾದ ಮಾಡಿದ್ದಾರೆ. ಇನ್ನಷ್ಟು ಸ್ಫೂರ್ತಿ ಪಡೆದು ಅಭಿವೃದ್ಧಿ ಪಥದತ್ತ ಕರ್ನಾಟಕವನ್ನು ಕೊಂಡುಯ್ಯುತ್ತೇವೆ. ಈ ಗೆಲುವು ಕಾಂಗ್ರೆಸ್ ಪಕ್ಷಕ್ಕೆ ಹೆಚ್ಚಿನ ಬಲಬಂತಾಗಿದೆ ಎಂದು ಹರ್ಷವ್ಯಕ್ತಪಡಿಸಿದರು.

ಮುಖಂಡರಾದ ಶಿವಾನಂದ ಉದಪುಡಿ, ಗುರುರಾಜ ಉದಪುಡಿ, ರವಿ ಬೋಳಿಶೆಟ್ಟಿ, ಷಣ್ಮೂಖಪ್ಪ ಕೋಲ್ಹಾರ, ಹೊಳಬಸು ದಂಡಿನ, ಗೋಪಾಲಗೌಡ ಪಾಟೀಲ, ಚನ್ನಯ್ಯ ಗಣಾಚಾರಿ, ಮುತ್ತಪ್ಪ ಚೌಧರಿ, ಕೃಷ್ಣಾ ಜಟ್ಟೆನ್ನವರ, ರೆಹೆಮಾನ್ ತೊರಗಲ್, ಶಾಂತೇಸ ಬೋಳಿಶೆಟ್ಟಿ, ಪ್ರಭು ಬೋಳಿಶೆಟ್ಟಿ, ಬಸವರಾಜ ಕುಂದರಗಿ, ಕುಮಾರ ಕಾಳಮ್ಮನವರ, ಜಾವೇದ ಮುಧೋಳ, ಅಬ್ದುಲ ವಾಲೀಕಾರ, ಲೋಕಣ್ಣಾ ಗಣಾಚಾರಿ ಮತ್ತಿತರು ಇದ್ದರು.



ಲೋಕಾಪುರ ಪಟ್ಟಣದ ಗುರಾರಾಜ ಉದಪುಡಿ ಅವರ ನಿವಾಸದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಶಿವಾನಂದ ಉದಪುಡಿ, ಗುರುರಾಜ ಉದಪುಡಿ, ರವಿ ಬೋಳಿಶೆಟ್ಟಿ, ಷಣ್ಮೂಖಪ್ಪ ಕೋಲ್ಹಾರ, ಹೊಳಬಸು ದಂಡಿನ ಇದ್ದರು.

16ರಿಂದ ಡಾ.ಮಹಾಂತ ಶಿವಯೋಗಿಗಳ ಶರಣೋತ್ಸವ

• **ಕನ್ನಡಪ್ರಭ ವಾರ್ತೆ** ಇಳಕಲ್ಲ

ಮಹಾಂತ ಜೋಳಿಗೆ ಹರಿಕಾರರು, ಬಸವತತ್ವದ ದಂಡನಾಯಕರಾದ ಡಾ.ಮಹಾಂತ ಶಿವಯೋಗಿಗಳ 8ನೇ ಶರಣೋತ್ಸವ ಕಾರ್ಯಕ್ರಮ ಮೇ 16 ರಿಂದ 19ರವರೆಗೆ ಆಚರಿಸಲು ನಿರ್ಧರಿಸಿದ ಹಿನ್ನೆಲೆ ಡಾ. ಗುರುಮಹಾಂತ ಸ್ವಾಮೀಜಿ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅನೇಕ ಪ್ರಮುಖ ನಿರ್ಣಯ ಕೈಗೊಳ್ಳಲಾಯಿತು.

ಡಾ. ಮಹಾಂತ ಶಿವಯೋಗಿಗಳ ಆಶಯದಂತೆ ಶರಣ ಸಿದ್ಧಾಂತ ವಿದ್ಯಾಪೀಠದಿಂದ ಇಷ್ಟಲಿಂಗದ ಪರಿಕಲ್ಪನೆ ಅರಿವು ಮೂಡಿಸುವುದು ಮತ್ತು ಮಹಾಂತ ಜೋಳಿಗೆ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ತಿಳಿಸಿದ ಹಿನ್ನೆಲೆ ಏಳು ವರ್ಷಗಳಿಂದ ಪ್ರತಿ ವರ್ಷ ಶ್ರೀಮಠದ ಶಾಖಾ ಮಠದಲ್ಲಿ ಇಂತಹ ಕಾರ್ಯಕ್ರಮ ಆಚರಿಸುತ್ತಾ ಬಂದಿದ್ದು, ಈ ಸಲ ಇಳಕಲ್ಲ ಶ್ರೀಮಠದ ಸದ್ಭಕ್ತರು ನಾವೇ ವಿಜೃಂಭಣೆಯಿಂದ ಕಾರ್ಯಕ್ರಮ ಆಚರಿಸುತ್ತೇವೆ ಎಂದು ಮನವಿ ಮಾಡಿದ ಪ್ರಯುಕ್ತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪೂಜ್ಯರು ತಿಳಿಸಿದರು.

15 ರಿಂದ ಸಮೀಪದ 8 ಗ್ರಾಮಗಳಲ್ಲಿ ಬೆಳಗ್ಗೆ ಮಹಾಂತ ಜೋಳಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಮೂರು ದಿನಗಳ ಕಾಲ ಒಳ್ಳೆಯ ವಿದ್ವಾಂಸರನ್ನು ಕರೆಸಿ ಶ್ರೀಮಠದ ಭಕ್ತರಿಗೆ ಶರಣರ ಅನುಭವ ಊಣ ಬಡಿಸಲಾಗುವುದು. ಬಸವ ತತ್ವ ಪರಿಪಾಲನೆ, ಮಕ್ಕಳಿಗೆ ಇಷ್ಟಲಿಂಗ ಪೂಜೆ ಹಾಗೂ ವಚನ ಒದುವುದಕ್ಕೆ ಕಲಿಸಲಾಗುವುದು.ಪೂರ್ವಭಾವಿ ಸಭೆಯಲ್ಲಿ ಹಿರಿಯರಾದ ಲಕ್ಷ್ಮಣ ಗುರಂ, ಡಾ. ಅರುಣಾ ಕೆ. ಅಕ್ಕಿ, ಕಿರಣ ಬಿಜ್ಜಲ, ಸಿ.ಸಿ. ಚಂದ್ರಾಪಟ್ಟಣ, ಎಲ್.ಬಿ. ಅರಸಿದ್ದಿ, ಎಸ್.ವಿ .ಪಾಟೀಲ, ಗೋಪಿಕೃಷ್ಣ ಕಠಾರೆ ಇತರರು ಮಾತನಾಡಿದರು.



ಶ್ರೀ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಚೇರ್ಮನ್ನ ಶಿವರುದ್ರಪ್ಪ ಗೊಂಗಡಶೆಟ್ಟಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು, ನಿವೃತ್ತ ಶಿಕ್ಷಕ ಸಂಗಣ್ಣ ಗದ್ದಿ ನಿರೂಪಿಸಿ ವಂದಿಸಿದರು. ನಗರದ ಅನೇಕ ಸಮಾಜಗಳ ಅಧ್ಯಕ್ಷರು ಕಾರ್ಯದರ್ಶಿಗಳು ಪದಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು

ಜಮಖಂಡಿಯಲ್ಲಿ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ್

10 ದಿನಗಳ ಉತ್ಸವದಲ್ಲಿ ಲಕ್ಷಾಂತರ ಜನರು ಭಾಗವಹಿಸುವ ನಿರೀಕ್ಷೆ: ಶಾಸಕ ಜಗದೀಶ ಗುಡಗುಂಟಿ ಮಾಹಿತಿ

• **ಕನ್ನಡಪ್ರಭ ವಾರ್ತೆ** ಜಮಖಂಡಿ

ಪ್ರತಿವರ್ಷ ಅಕ್ಟೋಬರ್ ತಿಂಗಳಲ್ಲಿ ನಡೆಯುವ ರಂಭಾಪುರಿ ಜಗದ್ಗುರು ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರ ದಸರಾ ದರ್ಬಾರ್ 2026ರ ಉತ್ಸವ ಜಮಖಂಡಿ ನಗರದಲ್ಲಿ ನಡೆಯಲಿದೆ. ಅದಕ್ಕಾಗಿ ಎಲ್ಲ ಸಮಾಜದವರು ಭಾಗವಹಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.ನಗರದ ಕಲ್ಯಾಣ ಮಠದಲ್ಲಿ ಏರ್ಪಡಿಸಿದ್ದ ಸಮಾರಂಭದ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಮೈಸೂರು ದಸರಾ ಉತ್ಸವದಂತೆ ಗುರುಗಳ ದಸರಾ ದರ್ಬಾರ್ ಉತ್ಸವ ಅದ್ದೂರಿಯಿಂದ ನಡೆಯುತ್ತದೆ. ಹಲವಾರು ನಗರಗಳ ಭಕ್ತರ ಅಪೇಕ್ಷೆಯ ಮಧ್ಯೆಯೂ ನಮ್ಮ ನಗರದಲ್ಲಿ ಉತ್ಸವ ನಡೆಸಲು ಗುರುಗಳು ಒಪ್ಪಿಗೆ ನೀಡಿರುವುದು ಸಂತಸದ ಸಂಗತಿಯಾಗಿದೆ ಎಂದು ತಿಳಿಸಿದರು. ಸನಾತನ ವೀರಶೈವ ಲಿಂಗಾಯತ ಧರ್ಮದ ಅತಿದೊಡ್ಡ ಉತ್ಸವವಾಗಿದ್ದು, ವಿವಿಧ ಮಠಗಳ ನೂರಾರು ಸ್ವಾಮೀಜಿಗಳು, ಪಂಚಪೀಠಾಧೀಶ್ವರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಚಿವರು, ಶಾಸಕರು ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. 10 ದಿನಗಳ ಉತ್ಸವದಲ್ಲಿ ಲಕ್ಷಾಂತರ ಜನರು ಭಾಗವಹಿಸುವ ನಿರೀಕ್ಷೆ ಇದೆ. 11.10.2026 ರಿಂದ 20.10.2026ರ ವರೆಗೆ ಉತ್ಸವ ನಡೆಯಲಿದೆ. ಉತ್ಸವದಲ್ಲಿ ಕೃಷಿಮೇಳ, ವಿವಿಧ ಶಿಬಿರಗಳು, ಇಷ್ಟಲಿಂಗ ಪೂಜೆ, ಲಿಂಗದೀಕ್ಷೆ ಸೇರಿದಂತೆ ಹತ್ತುಹಲವು ಕಾರ್ಯಕ್ರಮ ಆಯೋಜಿಸಲು ಉದ್ದೇಶಿಸಲಾಗಿದೆ. ಕಾರ್ಯಕ್ರಮದ ಯಶಸ್ಸಿಗೆ ವಿವಿಧ ಸಮಿತಿಗಳ ರಚನೆ ಹಾಗೂ ಜವಾಬ್ದಾರಿ ವಹಿಸಿಕೊಳ್ಳುವಂತೆ ಮನವಿ ಮಾಡಿದರು. ಕಲ್ಯಾಣ ಮಠದ ಗೌರಿಶಂಕರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮುತ್ತಿನಕಂತಿ ಮಠದ ಶಿವಲಿಂಗ ಶಿವಾಚಾರ್ಯರು, ಓಲೆಮಠದ ಆನಂದ ದೇವರು, ಕೊಣ್ಣೂರು ಹೊರಗಿನ ಮಠದ ವಿಶ್ವಪ್ರಭು ಸ್ವಾಮೀಜಿ, ಹಿರೇಪಡಸಲಗಿಯ ಶಿದ್ದಲಿಂಗ ಶಿವಾಚಾರ್ಯರು, ಶೂರ್ಪಾಲಿ ಸಾರಂಗ ಮಠದ ಸುನಂದಮ್ಮನವರು ಮಾತನಾಡಿದರು. ವಿವಿಧ ಸಮಾಜಗಳ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿ ಅಭಿಪ್ರಾಯ ಮಂಡಿಸಿದರು. ಅತಿಥಿಗಳಿಗೆ ಪ್ರಸಾದ ಹಾಗೂ ಉಳಿದುಕೊಳ್ಳುವ ವ್ಯವಸ್ಥೆಗಳ ಕುರಿತು ಚರ್ಚೆಗಳು ನಡೆದವು. ಚಂದ್ರು ಬಾಳೆಹಳ್ಳಿ , ವೀರೇಶ ಗುಮ್ಮಟ ಅವರು ವಿಶೇಷ ಸಲಹೆ ಸೂಚನೆ ನೀಡಿದರು,




ಜಮಖಂಡಿ ನಗರದಲ್ಲಿ ನಡೆಯಲಿರುವ ರಂಭಾಪುರಿ ಜಗದ್ಗುರುಗಳ ದಸರಾ ದರ್ಬಾರ ಕಾರ್ಯಕ್ರಮ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಮಠಾಧೀಶರು.

ಸೂಚನೆ... ಸುರಕ್ಷಿತ, ಗುಣಮಟ್ಟದ ವಸತಿ ಒದಗಿಸಲು ಇಲಾಖೆ ಕ್ರಮ

ಹೋಂ ಸ್ಟೇ ನೋಂದಣಿ ಕಡ್ಡಾಯ

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಜಿಲ್ಲೆಯಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳನ್ನು ವೇಗವಾಗಿ ವಿಸ್ತರಿಸುತ್ತಿರುವ ಹಿನ್ನೆಲೆಯಲ್ಲಿ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಹೋಂ ಸ್ಟೇ ಘಟಕಗಳನ್ನು ನಿಯಂತ್ರಿಸಿ, ಪ್ರವಾಸಿಗರಿಗೆ ಸುರಕ್ಷಿತ ಹಾಗೂ ಗುಣಮಟ್ಟದ ವಸತಿ ವ್ಯವಸ್ಥೆ ಒದಗಿಸುವ ಉದ್ದೇಶದಿಂದ ಪ್ರವಾಸೋದ್ಯಮ ಇಲಾಖೆ ಕಡ್ಡಾಯ ನೋಂದಣಿ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಜಾರಿ ತರಲಾಗದೆ.



ಇತ್ತೀಚಿನ ದಿನಗಳಲ್ಲಿ ಬಾದಾಮಿ, ಪಟ್ಟದಕಲ್ಲು, ಐಹೊಳೆ, ಕೂಡಲಸಂಗಮ ಸೇರಿದಂತೆ ವಿವಿಧ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದರಿಂದ ಅನೇಕ ಕಡೆಗಳಲ್ಲಿ ಅನುಮತಿ ಇಲ್ಲದೆ ಹೋಂ ಸ್ಟೇಗಳು ಕಾರ್ಯನಿರ್ವಹಿಸುತ್ತಿರುವುದು ಗಮನಕ್ಕೆ ಬಂದಿದೆ. ಇಂತಹ ಅನಧಿಕೃತ ಘಟಕಗಳು ಪ್ರವಾಸಿಗರ ಸುರಕ್ಷತೆ, ಸ್ವಚ್ಚತೆ, ಸರ್ಕಾರದ ನಿಯಮಗಳು ಹಾಗೂ ಸಾರ್ವಜನಿಕ ಶಾಂತಿ, ಸುವ್ಯವಸ್ಥೆಗೆ ಧಕ್ಕೆಯನ್ನುಂಟು ಮಾಡುವ ಸಾಧ್ಯತೆ ಇದೆ.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಹೋಂ ಸ್ಟೇ ಮಾಲೀಕರು ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಮಾರ್ಗಸೂಚಿಗಳ ಪ್ರಕಾರ ಕಡ್ಡಾಯವಾಗಿ ನೋಂದಣಿ ಪಡೆದು ಕಾನೂನು ಬದ್ಧವಾಗಿ ಕಾರ್ಯಾಚರಣೆ ಮಾಡಬೇಕು. ನೋಂದಣಿ ಪ್ರಕ್ರಿಯೆಯಲ್ಲಿ ಕಟ್ಟಡದ ಸುರಕ್ಷತೆ, ಸೌಲಭ್ಯಗಳು, ಅಗ್ನಿ ನಿಯಂತ್ರಣ ವ್ಯವಸ್ಥೆ, ಸ್ವಚ್ಚತೆ, ಕುಡಿಯುವ ನೀರು, ಶೌಚಾಲಯ, ಅತಿಥಿಗಳ ದಾಖಲೆ ಸಂಗ್ರಹಣೆ, ಪೊಲೀಸ್ ಪರಿಶೀಲನೆ ಸೇರಿದಂತೆ ಅನೇಕ ಅಂಶಗಳನ್ನು ಪರಿಶೀಲಿಸಲಾಗುತ್ತದೆ ಎಂದ ಡಿಸಿ;

ಹೋಂ ಸ್ಟೇ ಮಾಲೀಕರು ತಮ್ಮ ಘಟಕಗಳನ್ನು ನೋಂದಾಯಿಸಿಕೊಳ್ಳಲು ಅಗತ್ಯ ದಾಖಲೆಗಳಾದ ಗುರುತಿನ ಪತ್ರ, ಆಸ್ತಿ ದಾಖಲೆಗಳು, ಕಟ್ಟಡ ಅನುಮತಿ, ಪೊಲೀಸ್ ನಿರಾಕ್ಷೇಪಣಾ ಪ್ರಮಾಣಪತ್ರ ಸಲ್ಲಿಸಬೇಕು. ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಕೊಠಡಿ ಸಂ.137, ಜಿಲ್ಲಾಡಳಿತ ಭವನ, ನವನಗರ, ಬಾಗಲಕೋಟೆ ವಿಳಾಸಕ್ಕೆ ಸಂಪರ್ಕಿಸುವಂತೆ ಕೋರಲಾಗಿದೆ.

ಗುರುವಂದನೆ... ಸ್ನೇಹ ಸಮ್ಮೇಳನ ಉದ್ಘಾಟಿಸಿದ ಎಲ್.ಕೆ.ಹಾದಿಮನಿ

ಜ್ಞಾನದಿಂದ ಎಲ್ಲ ಸಾಧಿಸಬಹುದು

• **ಕನ್ನಡಪ್ರಭ ವಾರ್ತೆ** ಮುಧೋಳ

ಜಗತ್ತಿನಲ್ಲಿ ಜ್ಞಾನ ದಿಂದ ಎಲ್ಲವನ್ನು ಸಾಧಿಸಬಹುದಾಗಿದೆ. ಪ್ರತಿಯೊಬ್ಬ ಗುರು ಎಲ್ಲ ವಿದ್ಯಾರ್ಥಿಗಳು ಸಮಾಜದಲ್ಲಿ ತನಗಿಂತ ಮೇಲ್ಮಟ್ಟ ಹುದ್ದೆಗೆ ಏರಬೇಕೆಂದು ಬಯಸುತ್ತೇನೆಂದು ನಿವೃತ್ತ ಶಿಕ್ಷಕ ಎಲ್.ಕೆ.ಹಾದಿಮನಿ ಹೇಳಿದರು.

ನಗರದ ಆರ್.ಎಮ್.ಜಿ ಪಪೂ ಕಾಲೇಜಿನ 1999ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳ ಗುರುವಂದನೆ ಹಾಗೂ ಸ್ನೇಹ ಸಮ್ಮೇಳನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿದ್ದ ವ್ಹಿ.ಎನ್. ಜೈನಾಪುರ ಮಾತನಾಡಿ, 26 ವರ್ಷಗಳ ನಂತರ ಎಲ್ಲಾ ವಿದ್ಯಾರ್ಥಿಗಳು ಸೇರಿರುವುದು ವಿಶೇಷ, ತಾವು ದೇಶ, ವಿದೇಶಗಳಲ್ಲಿ ಉನ್ನತ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದನ್ನು ಕಂಡು ಸಂತಸವಾಗುತ್ತಿದೆ. ಅಂದು ಚಡಿ ಚಂ ಚಂ ವಿದ್ಯಾ ಗಮ್ ಗಮ್ ನೆನಪಿಸಿಕೊಂಡು ಹಾಡಿನ ಮುಖಾಂತರ ಪ್ರೇರಣೆ ನೀಡಿದರು.

ನಗರದ ಗವಿಮಠ-ವಿರಕ್ತಮಠದ ಬಸವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ತಮ್ಮ ಜೀವನದಲ್ಲಿ ಉತ್ತಮ ಸಂಸ್ಕಾರ ಜ್ಞಾನ ಬೆಳೆಸಿಕೊಂಡು ಸಮಾಜದಲ್ಲಿ ಉನ್ನತ ವ್ಯಕ್ತಿಗಳಾದರೆ ಮಾತ್ರ ಗುರುಗಳಿಗೆ ಗುರುದಕ್ಷಿಣೆ ನೀಡಿದಂತಾಗುತ್ತದೆ ಎಂದರು.





ತ್ರಿವೇಣಿಹಾದಿಮನಿಪ್ರಸ್ತಾವಿಕವಾಗಿಮಾತನಾಡಿದರು. ಶಿಕ್ಷಕರಾದ ಎಸ್.ಜಿ. ರೆಶ್ಮಿ,ಎಂ.ಜೆ. ರುದ್ರಾಕ್ಷಿ, ಪಿ.ಎಸ್. ಹಿರೇಮಠ, ಎಂ.ವಿ.ದಾಸರೆಡ್ಡಿ, ಎಸ್.ವಿ. ಕರೆಹೊನ್ನ, ವಿದ್ಯಾರ್ಥಿಗಳ ಪ್ರತಿನಿಧಿಯಾದ ತಮ್ಮಣ್ಣ ಮೀಸಿ, ಸಂತೋಷ ಪಾಲೋಜಿ, ಶಿವಕನ್ಯೆ ಕುಳ್ಳೊಳ್ಳಿ, ರಾಘು ಶಿಂಧೆ, ರಾಧಾ ಬಾಡಗಿ ಮತ್ತು ಎಲ್ಲ ಶಿಕ್ಷಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿವಿಧ ಸಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಶೋಭಾ ಕಟ್ಟಿ ಪ್ರಾರ್ಥಿಸಿದರು, ಅನಿಲ ಕಾಂತಿಮಠ ಸ್ವಾಗತಿಸಿದರು, ಸದುಗೌಡ ಪಾಟೀಲ ನಿರೂಪಿಸಿದರು. ಸದಾಶಿವ ಗೋರ್ಪಡೆ ವಂದಿಸಿದರು.

> ನೇಕಾರಿಕೆ ವೃತ್ತಿಯೊಂದಿಗೆ ಸಮಾಜದಲ್ಲಿ ಯುವಕರೇ ನಾಚುವ ರೀತಿಯಲ್ಲಿ ಕ್ರೀಯಾಶೀಲರಾಗಿ ಕಾರ್ಯ ಮಾಡುತ್ತಿದ್ದಾರೆ. ರಾಜಕೀಯ, ಸಾಮಾಜಿಕ, ಧಾರ್ಮಿಕವಾಗಿಯೂ ಸಮಾಜದಲ್ಲಿ ರಂಗಪ್ಪನವರದು ಬಹುಮುಖ ವ್ಯಕ್ತಿತ್ವ ಉಳ್ಳವರು.
> • **ಜಗದೀಶ ಶೆಟ್ಟರ** ಮಾಜಿ ಸಿಎಂ

ಸುದ್ದಿ ಸಿಂಚನ

ಇಂದು ಜಂಗಮ ವಟುಗಳಿಗೆ ಅಯ್ಯಾಚಾರ

ಮಹಾಲಿಂಗಪುರ: ಪಟ್ಟಣದ ಜಂಗಮ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಗುರುಲಿಂಗೇಶ್ವರ ಸ್ವಾಮೀಜಿ ಪುಣ್ಯಾರಾಧನೆ ನಿಮಿತ್ತ ಮೇ 6ರಂದು ಮಹಾಲಿಂಗೇಶ್ವರ ಸಂಸ್ಥಾನಮಠದಲ್ಲಿ ಜಂಗಮ ವಟುಗಳಿಗೆ ಅಯ್ಯಾಚಾರ, ಮಹಾಲಿಂಗೇಶ್ವರ ಸ್ವಾಮೀಜಿ ಜನ್ಮಶತಾಬ್ದಿ ಮತ್ತು ತುಲಾಭಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 6 ಗಂಟೆಗೆ ಗುರುಲಿಂಗೇಶ್ವರ ಸ್ವಾಮೀಜಿ ಗದ್ದುಗೆಗೆ ರುದ್ರಾಭಿಷೇಕ, 7 ಗಂಟೆಗೆ ಜಂಗಮ ವಟುಗಳಿಗೆ ಅಯ್ಯಾಚಾರ ನಡೆಯಲಿದೆ. 10 ಗಂಟೆಗೆ ನಡೆಯುವ ಮಹಾಲಿಂಗೇಶ್ವರ ಸ್ವಾಮೀಜಿ ಜನ್ಮಶತಾಬ್ದಿ ಮತ್ತು ತುಲಾಭಾರ ಕಾರ್ಯಕ್ರಮದ ಸಾನ್ನಿಧ್ಯವನ್ನು ಚಿಪ್ಪಲಕಟ್ಟಿಯ ಸಿದ್ಧಲಿಂಗ ಶಿವಾಚಾರ್ಯರು ವಹಿಸುವರು. ಗುರುಪಾದಯ್ಯ ಚಟ್ಟಿಮಠ ಅಧ್ಯಕ್ಷತೆ ವಹಿಸುವರು ಎಂದು ಸಂಘದ ಅಧ್ಯಕ್ಷ ಗುರುಪಾದಯ್ಯ ಚಟ್ಟಿಮಠ ತಿಳಿಸಿದರು. ಸಮಾಜದ ಪ್ರಮುಖರಾದ ಮಹಾಂತೇಶ ಮನ್ನಯ್ಯನವರಮಠ, ಸಾಗರ ಮಠದ, ಬಸವರಾಜ ಹಿಟ್ಟಿನಮಠ ಮಾತನಾಡಿದರು. ಗುರುಲಿಂಗಯ್ಯ ಮಠಪತಿ, ಕುಮಾರ ಮನ್ನಯ್ಯನವರಮಠ, ಚನ್ನಯ್ಯ ಮಸಗುಪ್ಪಿಮಠ ಇದ್ದರು.

ಪಿಡಿಒ ರಾಜ್ಯ ಸಂಘಕ್ಕೆ ರಾಜಶೇಖರ ಗೌರವಾಧ್ಯಕ್ಷ

ಮುಧೋಳ: ಕರ್ನಾಟಕ ರಾಜ್ಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಗೌರವಾಧ್ಯಕ್ಷರನ್ನಾಗಿ ಬೆಂಗಳೂರು ಇದರ ಕೇಂದ್ರ ಸಂಘಕ್ಕೆ ತಾಲೂಕಿನ ಇಂಗಳಗಿ ಗ್ರಾಮ ಪಂಚಾಯಿತಿ ಪಿಡಿಒ, ಕರ್ನಾಟಕ ರಾಜ್ಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಕ್ಷೇಮಾಭಿವೃದ್ಧಿ ಸಂಘದ ಮಾಜಿ ರಾಜ್ಯಾಧ್ಯಕ್ಷ ಹಾಗೂ ಕನ್ನಡಪ್ರಭ ಮತ್ತು ಸುವರ್ಣ ನ್ಯೂಸ್ ಸುವರ್ಣ ಸಾಧಕ ಪ್ರಶಸ್ತಿ ಪುರಸ್ಕೃತ ರಾಜಶೇಖರ ವಾರದ ಅವರನ್ನು ನಾಮ ನಿರ್ದೇಶನ ಮಾಡಿ ರಾಜ್ಯಾಧ್ಯಕ್ಷ ದಿಲೀಪ್ ಕುಮಾರ ಬಿ.ಎಂ ಆದೇಶಿಸಿದ್ದಾರೆ. ಪಿಡಿಒಗಳ ಹಿತರಕ್ಷಣೆ ಹಾಗೂ ಸಂಘಟನೆಯ ಬಲವರ್ಧನೆಗಾಗಿ ಈ ನೇಮಕ ಮಾಡಲಾಗಿದ್ದು, ಮುಂದಿನ ಮೂರು ವರ್ಷಗಳ ಕಾಲ ಅವರು ಈ ಹುದ್ದೆ ನಿರ್ವಹಿಸಲಿದ್ದಾರೆಂದು ತಿಳಿಸಿದ್ದಾರೆ. ರಾಜಶೇಖರ ವಾರದ ಅವರ ನೇಮಕಕ್ಕೆ ಸಂಘದ ಪದಾಧಿಕಾರಿಗಳು,ಸದಸ್ಯರು ಅಭಿನಂದಿಸಿದ್ದಾರೆ.



ಪ್ರಥಮ ಡಿಪ್ಲೊಮಾ ಪ್ರವೇಶ ಪ್ರಾರಂಭ

ಗುಳೇದಗುಡ್ಡ: ಸ್ಥಳೀಯ ವಸ್ತ್ರದ ರೂರಲ್ ಪಾಲಿಟೆಕ್ನಿಕ್ ಕಾಲೇಜಿನ 2026-27ನೇ ಸಾಲಿನ ಪ್ರಥಮ ಸೆಮಿಸ್ಟರ್ ಡಿಪ್ಲೊಮಾ ಎಂಜಿನಿಯರಿಂಗ್ ಪ್ರವೇಶಗಳು ಪ್ರಾರಂಭವಾಗಿವೆ. ಎಲೆಕ್ಟ್ರಾನಿಕ್ಸ್ - ಕಮ್ಯುನಿಕೇಷನ್ ಎಂಜಿನಿಯರಿಂಗ್, ಟೆಕ್ಸ್‌ಟೈಲ್ ಟೆಕ್ನಾಲಜಿ, ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್, ಎಲೆಕ್ಟ್ರಿಕಲ್ - ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ಹಾಗೂ ಸಿವಿಲ್ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಆಸಕ್ತ ವಿದ್ಯಾರ್ಥಿಗಳು ಕಾಲೇಜಿನ ಕಚೇರಿಯಲ್ಲಿ ಅರ್ಜಿ ಪಡೆದು ಮೂಲ ದಾಖಲಾತಿಗಳೊಂದಿಗೆ ಪ್ರವೇಶ ಪಡೆಯಬಹುದಾಗಿದೆ. ಎಸ್ಸೆಸ್ಸೆಲ್ಸಿಯಲ್ಲಿ ಕನಿಷ್ಠ ಶೇ.35ರಷ್ಟು ಅಂಕ ಪಡೆದಿರಬೇಕು. ಹಾಗೂ ಐಟಿಐ/ಪಿಯುಸಿ ಸೈನ್ಸ್‌ದಲ್ಲಿ ಪಾಸಾದವರಿಗೆ 3ನೇ ಸೆಮಿಸ್ಟರ್‌ಗೆ ನೇರಪ್ರವೇಶ ಸಿಗಲಿದೆ. ಮಾಹಿತಿಗೆ 9449190214, 9449712934 ಸಂಪರ್ಕಿಸಲು ಕೋರಲಾಗಿದೆ.

ಅಬಕಾರಿ ನಿರೀಕ್ಷಕಿ ವಿರುದ್ಧ ಜಾತಿ ನಿಂದನೆ ಪ್ರಕರಣ

ರಬಕವಿ-ಬನಹಟ್ಟಿ: ಆರೋಪಿಗಳ ಬಂಧನ ಸಂದರ್ಭ ಅಸಭ್ಯ ವರ್ತನೆಯೊಂದಿಗೆ ನಿಮ್ಮ ಮಕ್ಕಳನ್ನು ಕರೆಸಿ ಎಂದು ಹೊಡಿ ಬಡಿ ಮಾಡಿ ಜಾತಿ ನಿಂದನೆ ಮಾಡಿದ್ದರಾರೆಂದು ನಾವಲಗಿ ಗ್ರಾಮದ ಚಂದ್ರವ್ವ ಬಸಪ್ಪ ಕದಂ ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಆಗಿದ್ದೇನು?:ಮೇ 3ರಂದು ನಸುಕಿನ ಜಾವ 3 ಗಂಟೆ ವೇಳೆ ಅಕ್ರಮ ಸಾರಾಯಿ ಮಾರಾಟದಡಿ ಆರೋಪಿತರಾದ ಚಂದ್ರವ್ವ ಕದಂ ಎಂಬುವವರ ಮಕ್ಕಳಿಬ್ಬರ ಮೇಲೆ ಪ್ರಕರಣ ದಾಖಲಾದ ಕಾರಣ ಬಂಧಿಸಲು ನಾವಲಗಿ ಗ್ರಾಮದ ಅವರ ಮನೆಗೆ ತೆರಳಿದ್ದ ಜಮಖಂಡಿ ಅಬಕಾರಿ ನಿರೀಕ್ಷಕಿ ಗೀತಾ ತೆಗ್ಗಿಯವರಿಗೆ ಆರೋಪಿಗಳು ಸಿಗದಿದ್ದಾಗ ಮನೆಯಲ್ಲಿದ್ದ ಅವರ ತಾಯಿ ಚಂದ್ರವ್ವಳಿಗೆ ನಿಮ್ಮ ಮಕ್ಕಳನ್ನು ಕರೆಸಿ ಇಲ್ಲದಿದ್ದಾರೆ ಮುಂದೆ ಪರಿಣಾಮ ನೆಟ್ಟಗಿರೋದಿಲ್ಲವೆಂದು ಹೊಡಿ-ಬಡಿ ಮಾಡಿ ಜಾತಿ ನಿಂದನೆ ಮಾಡಿದ್ದಾರೆಂದು ಚಂದ್ರವ್ವ ಕದಂ ದೂರಿದ್ದಾರೆ. ಪ್ರಕರಣದ ಕುರಿತು ಅಬಕಾರಿ ನಿರೀಕ್ಷಕಿ ಗೀತಾ ತೆಗ್ಗಿ ಸೇರಿ 7 ಸಿಬ್ಬಂದಿ ಮೇಲೆ ಬನಹಟ್ಟಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಡಿವೈಎಸ್ಪಿ ರೋಷಣ್ ಜಮೀರ್, ಸಿಪಿಐ ಮಹಾದೇವ ಶಿರಹಟ್ಟಿ, ಪಿಎಸ್‌ಐ ಶಿವರಾಜ ದರಿಗೋಣ ತನಿಖೆ ಮುಂದುವರೆಸಿದ್ದಾರೆ.

ರಂಗಪ್ಪನವರ ಸೇವೆ ಸಮಾಜಕ್ಕೆ ಮಾದರಿ: ಜಗದೀಶ ಶೆಟ್ಟರ

ರಂಗಪ್ಪ ಶೇಬಿನಕಟ್ಟಿ ಅಭಿನಂದನಾ ಸಮಿತಿಯಿಂದ ಗ್ರಂಥಗಳ ಬಿಡುಗಡೆ

• **ಕನ್ನಡಪ್ರಭ ವಾರ್ತೆ** ಗುಳೇದಗುಡ್ಡ

ಆರ್.ಎಸ್.ಎಸ್. ಹಿರಿಯ ಸ್ವಯಂ ಸೇವಕ ರಂಗಪ್ಪ ಶೇಬಿನಕಟ್ಟಿ ಅವರ ಸಮಾಜಮುಖಿ ಕಾರ್ಯ, ಫಲಾಪೇಕ್ಷೆ ಇಲ್ಲದ ಸೇವೆಗಳು ಸಮಾಜಕ್ಕೆ ಮಾದರಿಯಾಗಿವೆ. ಅವರು ಸದಾ ಕ್ರಿಯಾಶೀಲ ಚಟುವಟಿಕೆ ಮೂಲಕ ನಮಗೆಲ್ಲ ಆದರ್ಶರಾಗಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ ಹೇಳಿದರು.

ಪಟ್ಟಣದಲ್ಲಿ ರಂಗಪ್ಪ ಶೇಬಿನಕಟ್ಟಿ ಅಭಿನಂದನಾ ಸಮಿತಿ ಆಯೋಜಿಸಿದ್ದ ರಂಗಪ್ಪ ಶೇಬಿನಕಟ್ಟಿ ಅವರ ಸಹಸ್ರ ಚಂದ್ರದರ್ಶನ ಹಾಗೂ ಗ್ರಂಥಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ಸರಳ, ಸಜ್ಜನಿಕೆ ಮೈಗೂಡಿಸಿಕೊಂಡು ನಿಷ್ಠೆಯಿಂದ ಕಾರ್ಯ ಮಾಡುತ್ತಿದ್ದ ರಂಗಪ್ಪನವರ ಬಹುಮುಖ ವ್ಯಕ್ತಿತ್ವ ಸಮಾಜಕ್ಕೆ, ನಾಡಿಗೆ ಪ್ರೇರಣೆಯಾಗಿವೆ ಎಂದರು.

ನೇಕಾರಿಕೆ ವೃತ್ತಿಯೊಂದಿಗೆ ಸಮಾಜದಲ್ಲಿ ಯುವಕರೇ ನಾಚುವ ರೀತಿಯಲ್ಲಿ ಕ್ರೀಯಾಶೀಲರಾಗಿ ಕಾರ್ಯ ಮಾಡುತ್ತಿದ್ದಾರೆ. ರಾಜಕೀಯ, ಸಾಮಾಜಿಕ, ಧಾರ್ಮಿಕವಾಗಿಯೂ ಸಮಾಜದಲ್ಲಿ ರಂಗಪ್ಪನವರದು ಬಹುಮುಖ ವ್ಯಕ್ತಿತ್ವ ಉಳ್ಳವರು ಎಂದ ಬಣ್ಣಿಸಿದ ಅವರು, ಅವಕಾಶ ಸಿಕ್ಕಾಗ ಸಮಾಜ ಒಪ್ಪುವ ಕೆಲಸ ಮಾಡಬೇಕು. ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಸಾಕಷ್ಟು ಕಾರ್ಮಿಕರನ್ನು ಕಾಯಂಗೊಳಿಸಿದ್ದು ನನಗೆ ತೃಪ್ತಿ ತಂದಿದೆ ಎಂದು ಹೇಳಿದರು.

ಭಾರತೀಯ ಶಿಕ್ಷಣ ಮಂಡಳಿ ಅಖಿಲ ಭಾರತೀಯ ಸಂಘಟನಾಮಂತ್ರಿ ಶಂಕರಾನಂದಜೀ ಮುಖ್ಯ ವಕ್ತಾರರಾಗಿ ಮಾತನಾಡಿ, ಹಿರಿಯರನ್ನು ಗೌರವಿಸುವುದು ಭಾರತೀಯ ಸಂಸ್ಕೃತಿಯಾಗಿದೆ. ಮಾನವ ಮಹಾದೇವನಾಗಿ ಮಾಧವನಾಗಬೇಕಾದರೆ ಅವರಲ್ಲಿ ಫಲಾಪೇಕ್ಷೆ ಇಲ್ಲದ, ಉತ್ತಮ ನಡವಳಿಕೆ ಅವಶ್ಯವಾಗಿವೆ. ಆ ಆದರ್ಶ ಗುಣಸ್ವಭಾವ, ಭಾರತೀಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ರಂಗಪ್ಪ ಶೇಬಿನಕಟ್ಟಿ ಸಮಾಜಕ್ಕೆ ಆದರ್ಶಪ್ರಾಯರು ಎಂದು ಹೇಳಿದರು.

ರಂಗಪ್ಪ ಶೇಬಿನಕಟ್ಟಿ ಅವರ ನೋವುಂಡು ನಲಿದವರು ಅಭಿನಂದನಾ ಗ್ರಂಥ, ಡಾ.ವಿ.ಎ. ಬೆನಕನಾಳ ಅವರ ರಾಷ್ಟ್ರ ನೇತಾರ ಅಟಲ್ ಬಿಹಾರ ವಾಜಪೇಯಿ ಕುರಿತ ಪುಸ್ತಕ, ಎಸ್.ವಿ. ಚವಡಾಪೂರ ಅವರ ದೇವರ ದಾಸಿಮಯ್ಯನವರ ಆಯ್ದ 50 ವಚನಗಳು ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ಸಂಸದ ಪಿ.ಸಿ. ಗದ್ದಿಗೌಡರ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಹಂಪಿಹೇಮಕೂಟದ ಶ್ರೀಜಗದ್ಗುರು ದಯಾನಂದಪುರಿ ಸ್ವಾಮೀಜಿ, ಶ್ರೀಜಗದ್ಗುರು ಗುರುಸಿದ್ದ ಪಟ್ಟದಾರ್ಯ ಸ್ವಾಮೀಜಿ, ಮಳೆರಾಜೇಂದ್ರಮಠದ ಶ್ರೀಭಾಸ್ಕರ ಸ್ವಾಮೀಜಿ, ರಾಘವೇಂದ್ರಸ್ವಾಮಿ ದೇವಾಂಗಮಠ ಸಾನ್ನಿಧ್ಯ ವಹಿಸಿದ್ದರು. ಆರ್.ಎಸ್.ಎಸ್.ಸಂಘ ಚಾಲಕ ಬಸವರಾಜ ಡಂಬಳ, ದೇವಾಂಗ ರಾಜ್ಯ ಸಂಘದ ಅಧ್ಯಕ್ಷ ರವೀಂದ್ರ ಕಲಬುರ್ಗಿ, ಸಮಿತಿ ಅಧ್ಯಕ್ಷ, ಮಾಜಿ ಶಾಸಕ ರಾಜಶೇಖರ ಶೀಲವಂತ, ಡಾ.ವಿ.ಎಬನಕನಾಳ, ಎಸ್.ವಿ.ಚೌಡಾಪೂರ, ಪ್ರಕಾಶ ಶೇಬಿನಕಟ್ಟಿ, ರವಿ ಶೇಬಿನಕಟ್ಟಿ ಇತರರು ಇದ್ದರು. ವಿವೇಕಾನಂದ ದೇವಾಂಗಮಠ, ಐಶ್ವರ್ಯ ಕಂಠಗೌಡ್ರ, ಜ್ಞಾನೇಶ್ವರ ಬೊಂಬಲೇಕರ ನಿರೂಪಿಸಿದರು.



> ಶ್ರೀ ರಂಗಪ್ಪ ಶೇಭಿನಕಟ್ಟಿ ಅವರದು ಬಹುಮುಖ ವ್ಯಕ್ತಿತ್ವ, ಯಾವುದೇ ಸಮಾಜಮುಖಿ ಕಾರ್ಯಗಳಿದ್ದರೆ ಅವರು ನಿಸ್ವಾರ್ಥಭಾವದಿಂದ ತೊಡಗಿಕೊಳ್ಳುವ ಸ್ವಭಾವದವರು. ಅವರ ಗುಣಗಳನ್ನು ಯುವ ಜನತೆ ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಬದುಕು ಸಾರ್ಥಕವಾಗುತ್ತದೆ.
> • **ಪಿ.ಸಿ.ಗದ್ದಿಗೌಡರ** ಸಂಸದರು

ಸಮಾಜವನ್ನು ಸನ್ಮಾರ್ಗದಲ್ಲಿ ನಡೆಸುವ ಶಿಕ್ಷಣ ಅವಶ್ಯಕ

ಶಾಲೆ ಹಾಗೂ ನೂತನ ಕಟ್ಟಡ ಉದ್ಘಾಟಿಸಿದ ಶ್ರೀಶೈಲ ಜಗದ್ಗುರು

• **ಕನ್ನಡಪ್ರಭ ವಾರ್ತೆ** ರಬಕವಿ-ಬನಹಟ್ಟಿ

ಶಿಕ್ಷಣ, ನೈತಿಕತೆ ಮತ್ತು ಸಾಂಸ್ಕೃತಿಕ ಜಾಗೃತಿಯ ಬಗ್ಗೆ ಇಂದಿನ ಶಿಕ್ಷಣ ಸಂಸ್ಥೆಗಳು ಒತ್ತು ನೀಡಬೇಕೆಂದು ಶ್ರೀಶೈಲ ಜಗದ್ಗುರು ಡಾ.ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ಹೇಳಿದರು.

ಸಮೀಪದ ಯಲ್ಲಟ್ಟಿಯಲ್ಲಿ ಜಗಜ್ಯೋತಿ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಡಿಯಲ್ಲಿ ಮಂಗಳವಾರ ವಿಶ್ವಭಾರತಿ ಅಂತಾರಾಷ್ಟ್ರೀಯ ಶಾಲೆ ಹಾಗೂ ನೂತನ ಕಟ್ಟಡ ಉದ್ಘಾಟಿಸಿ ಅವರು ಮಾತನಾಡಿದರು. ಕೇವಲ ಸಾಂಪ್ರದಾಯಿಕ ಶಿಕ್ಷಣವಲ್ಲದೆ, ಜೀವನಕ್ಕೆ ಅಗತ್ಯವಾದ ಮೌಲ್ಯಗಳನ್ನು, ನೀತಿ ಕಥೆಗಳನ್ನುತಿಳಿಸುವಮೂಲಕಸಮಾಜವನ್ನು ಸನ್ಮಾರ್ಗದಲ್ಲಿ ನಡೆಸುವ ಶಿಕ್ಷಣದ ಅವಶ್ಯಕತೆಯಿದೆಯೆಂದರು.

ಶಾಸಕ ಸಿದ್ದು ಸವದಿ ಮಾತನಾಡಿ, ಸ್ವತಂತ್ರ ಭಾರತದಲ್ಲಿ ಎಲ್ಲರಿಗೂ ಶಿಕ್ಷಣದ ಹಕ್ಕಿದೆ. ಜಾಗತಿಕ ಮಟ್ಟದಲ್ಲಿ ಶಿಕ್ಷಣವನ್ನು ದೇಶ ಹಾಳು ಮಾಡುವ ಭಯೋತ್ಪಾದಕತೆ ಸೃಷ್ಟಿಯಾಗುತ್ತಿರುವುದು ಆತಂಕದ ಬೆಳವಣಿಗೆಯಯಾಗಿದೆ. ಕೇವಲ ಜಾಣರನ್ನು ಸೆಳೆಯಲು ಪ್ರವೇಶಾತಿ ಪರೀಕ್ಷೆಗಳು ಬೇಡ. ಸಾಮಾನ್ಯ ವಿದ್ಯಾರ್ಥಿಗಳಿಗೆ ಪೂರಕ ಶಿಕ್ಷಣದೊಂದಿಗೆ ಪ್ರತಿಭಾವಂತರನ್ನಾಗಿಸುವುದೇ ಶಿಕ್ಷಣದ ಗುರಿಯಾಗಬೇಕೆಂದರು.

ಗದಗ ಶಿರುಂಜಿಯ ಬಸವ ಸಮರ್ಥ ಸಿದ್ಧೇಶ್ವರ ಶ್ರೀ, ಯಶವಂತ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಶಾಸಕರಾದ ಹಣಮಂತ ನಿರಾಣಿ, ಸುನೀಲಗೌಡ ಪಾಟೀಲ, ಪ್ರಾಧಿಕಾರ ಅಧ್ಯಕ್ಷ ದಾನಪ್ಪ ಹುಲಜತ್ತಿ, ಸಿ.ಎಂ. ನ್ಯಾಮಗೌಡ, ಬಿ.ಕೆ. ಕೊಣ್ಣೂರ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಇದೇ ಸಂದರ್ಭ ಸಂಸ್ಥೆ ಅಧ್ಯಕ್ಷ ಸದಾಶಿವ ಸಂತಿ, ಸದಾಶಿವ ಗೌಡಪ್ಪನವರ, ವಸಂತ ಪಾಟೀಲ, ಭಾರತಿ ನ್ಯಾಮಗೌಡ, ಸುಜಾತಾ ಹನಗಂಡಿ, ಅಪ್ಪಜಪ್ಪ ಸಂತಿ, ಗೋಪಾಲ ಲಡ್ಡಾ, ರಾಜು ಕಡಕಭಾಂವಿ, ಮುಖ್ಯಶಿಕ್ಷಕ ಗಣೇಶ ಚಿಕ್ಕೂಡ, ಮಲ್ಲು ಭದ್ರನ್ನವರ, ಶಂಕರ ಸೊರಗಾಂವಿ, ಶಂಕರ ಜುಂಜಪ್ಪನವರ, ಮಲ್ಲಣ್ಣ ಕಕಮರಿ, ಸಚಿನ ಪಡಸಲಗಿ, ಚಂದ್ರವ್ವ ಸಂತಿ, ಲಕ್ಕವ್ವ ಸಂತಿ ಸೇರಿದಂತೆ ಅನೇಕರಿದ್ದರು.



ಯಲ್ಲಟ್ಟಿಯ ವಿಶ್ವಭಾರತಿ ಅಂತಾರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ನೂತನ ಕಟ್ಟಡ ಹಾಗೂ ಶಾಲಾ ಪ್ರಾರಂಭೋತ್ಸವಕ್ಕೆ ಶ್ರೀಶೈಲ ಜಗದ್ಗುರುಗಳು ಉದ್ಘಾಟಿಸಿದರು.

115 ವಿದ್ಯಾರ್ಥಿಗಳಿಗೆ ಸತ್ಕಾರ, ಪುರಸ್ಕಾರ



• **ಕನ್ನಡಪ್ರಭ ವಾರ್ತೆ** ಮಹಾಲಿಂಗಪುರ

ಇಲ್ಲಿನ ಕೆಎಲ್‌ಇ ಸಂಸ್ಥೆಯ ಪದವಿ ಕಾಲೇಜಿನಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನ ಸಾಕ್ಷಾತ್ ಪ್ರತಿಭಾವಂತರ ಜಾತ್ರೆಯಂತಾಗಿ ಕಂಗೊಳಿಸಿತು. ಶೈಕ್ಷಣಿಕ, ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ಸಾಧಕ ವಿದ್ಯಾರ್ಥಿಳಿಗೆ ಸನ್ಮಾನಗಳ ಸುರಿಮಳೆ, ಪ್ರಶಸ್ತಿಗಳ ಸರಮಾಲೆ ಕಂಡುಬಂತು.

ಕಾರ್ಯಕ್ರಮದಲ್ಲಿ 13 ಜನ ಕಾಲೇಜು ಸಂಸತ್ತಿನ ಸದಸ್ಯರು, ಶೇ.100 ಅಂಕ ಪಡೆದ 23 ವಿದ್ಯಾರ್ಥಿಗಳು, ಕ್ರೀಡೆಯಲ್ಲಿ ಯುನಿವರ್ಸಿಟಿ ಬ್ಲೂ ಆಗಿ ಹೊರಹೊಮ್ಮಿದ 12 ಕ್ರೀಡಾರ್ಥಿಗಳು, ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತ 30 ಪ್ರತಿಭಾವಂತರು ಸೇರಿ 115 ಸಾಧಕ ವಿದ್ಯಾರ್ಥಿಗಳಿಗೆ ಸತ್ಕಾರ ಮಾಡಿ, ₹74 ಸಾವಿರ ನಗದು ಪುರಸ್ಕಾರ ನೀಡಲಾಯಿತು.

ಈ ಬಹುಮಾನಗಳಿಗೆ ಕಾಲೇಜಿನ ಶೈಕ್ಷಣಿಕ ಕುಟುಂಬವೆನಿಸಿದ ಹಳೆಯ ವಿದ್ಯಾರ್ಥಿಗಳು, ನಿವೃತ್ತ ಶಿಕ್ಷಕರು, ಅಧ್ಯಾಪಕರು ಕೈಜೋಡಿಸಿದ್ದು ವಿಶೇಷವಾಗಿತ್ತು. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸದಅನುಭವಮತ್ತುಮಧುರನೆನಪುಹಂಚಿಕೊಅಡರು. ವಿದ್ಯಾರ್ಥಿ ಕಲಾವಿದ ವಿನಾಯಕ ಭಜಂತ್ರಿ ನಾದಮಯ ಎಂಬ ಪ್ರಾರ್ಥನಾಗೀತೆ ಹಾಡಿ ಎಲ್ಲರೂ ತಲೆದೂಗುವಂತೆ ಮಾಡಿದರು.

ಪದವಿಯ 3 ವರ್ಷದಲ್ಲಿ 1157 ವಿದ್ಯಾರ್ಥಿಗಳು, 96 ವಾರ, 720 ದಿನ ನಡೆದ ತರಗತಿಗೆ ಹಾಜರಾಗಿ, 90 ಕಿರು ಪರೀಕ್ಷೆ ಎದುರಿಸಿ, 45 ಸೆಮಿಸ್ಟರ್‌ಕೊನೆಯ ಪರೀಕ್ಷೆ ಬರೆದು ಹೊರಹೋಗುವ ಆರೋಹಣ ಕಾರ್ಯಕ್ರಮ ಭಾವನಾತ್ಮಕ ಬಂಧಕ್ಕೆ ಗಂಧ ತೀಡಿದಂತೆ ಇತ್ತು.

ಮುಖ್ಯ ಅತಿಥಿಯಾಗಿ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಎಸ್.ಬಿ.ಮಾಟೋಳಿ, ವಿಶೇಷ ಆಮಂತ್ರಿತರಾಗಿ ಸ್ಥಾನಿಕ ಆಡಳಿತ ಮಂಡಳಿ ಸದಸ್ಯರಾದ ಅಶೋಕ ಅಂಗಡಿ, ಪ್ರಾಚಾರ್ಯ ಎಲ್.ಬಿ.ತುಪ್ಪದ, ಉಪಪ್ರಾಂಶುಪಾಲ ಬಿ.ಎನ್.ಅರಕೇರಿ ಭಾಗವಹಿಸಿದ್ದರು. ಪದವಿ ಪ್ರಾಚಾರ್ಯ ಎನ್.ಬಿ.ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಡಾ.ಸುನಂದಾ ಸೋರಗಾಂವಿ, ಜೆ.ಆರ್.ಪಾಟೀಲ, ಎಸ್.ಎ.ಪಾಟೀಲ, ಎಂ.ಬಿ.ಧರಿಗೌಡ, ಪಿ.ಎಸ್.ಹಿಪ್ಪರಗಿ, ಚಂದ್ರಿಕಾ ಇಟ್ನಾಳ, ಟಿ.ಡಿ.ಡಂಗಿ, ಪಿ.ಎಂ. ಮುತ್ನಾಳಿ, ಎಸ್.ಎಸ್.ಕೋಳಿ ಇದ್ದರು.

ಆಸ್ತಿ ತೆರಿಗೆ ರಿಯಾಯತಿ ಅವಧಿ ವಿಸ್ತರಣೆ

• **ಕನ್ನಡಪ್ರಭ ವಾರ್ತೆ** ಮುಧೋಳ

ಮುಧೋಳ ನಗರಸಭೆ ವ್ಯಾಪ್ತಿಯಲ್ಲಿ ಬರುವ ಆಸ್ತಿ ಮಾಲೀಕರು ಸರ್ಕಾರದ ಅಧಿಸೂಚನೆಯಂತೆ 2026-27ನೇ ಸಾಲಿನ ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿಸಲು ಏ.1ರಿಂದ 30ರವರೆಗೆ ಶೇ.5ರಷ್ಟು ರಿಯಾಯಿತಿ ಅವಧಿ ನಿಗದಿಪಡಿಸಿತ್ತು. ಈಗ ಸರ್ಕಾರದ ಆದೇಶದಂತೆ ಮೇ1ರಿಂದ 31ರವರೆಗೆ ವಿಸ್ತರಿಸಿ ಆದೇಶ ಮಾಡಿದೆ. ಕಾರಣ ಆಸ್ತಿ ಮಾಲೀಕರು ತಮ್ಮ ಆಸ್ತಿ ತೆರಿಗೆಯನ್ನು ಮೇ 31ರೊಳಗಾಗಿ ಪಾವತಿಸಿ ಶೇ.5ರಷ್ಟು ರಿಯಾಯಿತಿಯ ಲಾಭ ಪಡೆದುಕೊಂಡು ನಗರದ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಬೇಕೆಂದು ನಗರಸಭೆ ಪೌರಾಯುಕ್ತ ಗೋಪಾಲ ಕಾಸೆ, ನಗರಸಭೆ ಕಚೇರಿ ವ್ಯವಸ್ಥಾಪಕಿ ಭಾರತಿ ದೇವಿ ಜೋಶಿ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಉದ್ಯೋಗಾವಕಾಶ ಸದ್ಬಳಕೆ ಮಾಡಿಕೊಳ್ಳಿ

• **ಕನ್ನಡಪ್ರಭ ವಾರ್ತೆ** ಜಮಖಂಡಿ

ಕ್ಯಾಪಂಸ್ ಸಂದರ್ಶನಗಳು ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸುತ್ತಿದ್ದು, ಅವುಗಳಸದುಪಯೋಗಪಡಿಸಿಕೊಳ್ಳಬೇಕೆಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಸುನಂದಾ ಶಿರೂರ ಹೇಳಿದರು. ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಐಕ್ಯೂಎಸಿ, ಮ್ಯಾಗ್ನೆಸ್ ಇಂಟರ್ ನ್ಯಾಶನಲ್ ಪ್ರೈ.ಲಿ. ಹಾಗೂ ಪೋರ್ಟಲ್ ಎಚ್.ಆರ್. ಕನ್ಸಲ್ಟನ್ಸಿಸರ್ವಿಸಸ್ ಇವರಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ಕ್ಯಾಂಪಸ್ ಸಂದರ್ಶನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವಿದ್ಯಾರ್ಥಿಗಳು ಉತ್ತಮ ಅಂಕಗಳ ಜೊತೆಗೆ ಕೌಶಲ ಬೆಳೆಸಿಕೊಳ್ಳಬೇಕು. ಇದರಿಂದ ಭವಿಷ್ಯದಲ್ಲಿ ಒಳ್ಳೆಯ ಅವಕಾಶಗಳು ದೊರಕುತ್ತವೆ ಎಂದು ತಿಳಿಸಿದರು.

ಮ್ಯಾಗ್ನೆಸ್ ಇಂಟರ್ ನ್ಯಾಶನಲ್ ಪ್ರೈ.ಲಿ. ಕಂಪನಿಯ ಎಚ್.ಆರ್. ಸುಹಾಸ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಂದರ್ಶನದಲ್ಲಿ ಯಶಸ್ವಿಯಾಗಲು ಅಗತ್ಯವಾದ ಕೌಶಲ್ಯ, ಆತ್ಮವಿಶ್ವಾಸ, ಸಂಹನ, ವ್ಯಕ್ತಿತ್ವ ವಿಕಾಸದ ಕುರಿತು ವಿವರಿಸಿದರು.

ಪೋರ್ಟಲ್ ಎಚ್.ಆರ್. ಕನ್ಸಲ್ಟನ್ಸಿ ಸರ್ವಿಸಸ್‌ನ ಎಚ್.ಆರ್. ಪೂಜಾ ಮತ್ತು ಕಾವ್ಯಾ, ಅಮ್ಮಣ್ಣ ಕುರುಂದವಾಡ, ಶಿವಲೀಲಾ ಎಚ್, ಡಾ.ಬಿ.ಎಂ. ಕೊರಬು, ಪ್ರಭು ಅವರಾದಿ, ಅನಸೂಯಾ ವೈ. ಮಬ್ರುಮಕರ, ಎಸ್.ಬಿ. ತೇರದಾಳ, ವಿನಾಯಕ ಹಿಮಕರ ಉಪಸ್ಥಿತರಿದ್ದರು. ಕ್ಯಾಂಪಸ್ ಸಂದರ್ಶನದಲ್ಲಿ 415 ವಿದ್ಯಾರ್ಥಿಗಳು ಭಾಗವಹಿಸಿದ್ದರು. 67 ವಿದ್ಯಾರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಯಿತು.



ಜಮಖಂಡಿ ನಗರದ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ನಡೆದ ಕ್ಯಾಂಪಸ್ ಸಂದರ್ಶನ ದಲ್ಲಿ 67 ವಿದ್ಯಾರ್ಥಿನಿಯರಿಗೆ ನೇಮಕಾತಿ ಆದೇಶವನ್ನು ನೀಡಲಾಯಿತು.

ಡಾ.ಸಂತೋಷ ಬಡಜನರ ಆರೋಗ್ಯ ಸೇವೆ ಸ್ಮರಣೀಯ

• **ಕನ್ನಡಪ್ರಭ ವಾರ್ತೆ** ಇಳಕಲ್ಲ

ಪೂಜಾರ ಆಸ್ಪತ್ರೆಯು ತಾಲೂಕಿನಲ್ಲಿರುವ ಹಲವಾರು ಗ್ರಾಮಗಳ ಬಡ ಜನರ ಆರೋಗ್ಯ ಸೇವೆ ಮಾಡುವ ಉತ್ತಮವಾದ ಆಸ್ಪತ್ರೆ ಎಂದರೂ ತಪ್ಪಲ್ಲ. ಬಡ ಜನರ ಆರೋಗ್ಯ ಸೇವೆಯೇ ಈ ಸಂಸ್ಥೆಯ ಮುಖ್ಯ ಗುರಿಯಾಗಿದೆ ಎಂದು ಶಿಕ್ಷಣ ಇಲಾಖೆಯ ನಿವೃತ್ತ ದೈಹಿಕ ನಿರ್ದೇಶಕ ಪ್ರೊ.ವೀರಣ್ಣ ಜೀರಗಿ ಹೇಳಿದರು.

ನಗರದ ಕಂದಗಲ್ಲ ರಸ್ತೆಯಲ್ಲಿರುವ ಡಾ. ಸಂತೋಷ ಪೂಜಾರ ಅವರ ಆಸ್ಪತ್ರೆಯಲ್ಲಿ ಆರೋಗ್ಯ ಉಚಿತ ತಪಾಸಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಡಾ.ಸಂತೋಷ ಅವರು ಗೆಳೆಯರನ್ನು ಕೂಡಿಸಿಕೊಂಡು ನಿಹಾರಿಕಾ ಸಮಾಜ ಸೇವೆ ಸಂಸ್ಥೆ ಪ್ರಾರಂಭಿಸಿದ್ದಾರೆ. ಅದರ ಮೂಲಕ ಅನೇಕ ಜನಪರಕಾರ್ಯಗಳನ್ನುಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಡಾ.ಉಮರ ಉಸ್ಮಾನಗಣಿ ಹುಮನಾಬಾದ ಹಾಗೂ ಚರ್ಮ ರೋಗ ತಜ್ಞರಾದ ಡಾ.ರೋಹನ ರಾಠೋಡ ಅವರಂತಹ ಉತ್ತಮ ವೈದ್ಯರನ್ನು ಇಳಕಲ್ಲ ನಗರಕ್ಕೆ ಕರೆಸಿಕೊಂಡು ಅವರಿಂದಲೂ ಉಚಿತ ತಪಾಸಣೆ ಮತ್ತು ಚಿಕಿತ್ಸೆ ಮಾಡಿಸುತ್ತಿರುವುದು ಉತ್ತಮ ನಡೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿದ್ದ ಹಿರಿಯ ಪತ್ರಕರ್ತ ಬಸವರಾಜ ಮಠದ ಮಾತನಾಡಿ, ಬಡವರ ಮತ್ತು ರೋಗಿಗಳ ಸೇವೆಯಲ್ಲಿ ಸದಾ ಸಂತೋಷವನ್ನು ಕಾಣುವವರು ಡಾ. ಸಂತೋಷ ಪೂಜಾರ. ಸದಾ ಸಮಾಜ ಪರವಾದ ಕಾಳಜಿಯನ್ನು ಹೊಂದಿರುವ ಅವರ ಬಗ್ಗೆ ಹೇಳುವ ಪದಗಳೇ ಸಾಲುತ್ತಿಲ್ಲ. ವೈದ್ಯಕೀಯ ಕ್ಷೇತ್ರದಲ್ಲಿ ಸದಾ ಸೇವಾ ಮನೋಭಾವದೊಂದಿಗೆ ಸ್ಮರಣೀಯ ಕಾರ್ಯಗಳನ್ನು ಅವರು ಹಮ್ಮಿಕೊಳ್ಳುತ್ತಾ ಬಂದಿದ್ದಾರೆ ಎಂದು ಶ್ಲಾಘಿಸಿದರು.

ಇತ್ತೀಚೆಗಷ್ಟೇ ಬೇಸಿಗೆ ಬಿಸಿಲಿನಿಂದ ಪಕ್ಷಿಗಳು ತೊಂದರೆ ಅನುಭವಿಸಬಾರದು ಎಂದು ಒಂದು ಸಾವಿರ ದೊಡ್ಡ ಪಣತೆಗಳಲ್ಲಿ ಜೋಳದ ಕಾಳು ಮತ್ತು ಕುಡಿಯುವ ನೀರು ಇಟ್ಟು ಒಂದು ಸಾವಿರ ಗಿಡಗಳಲ್ಲಿ ಕಟ್ಟಿ ಬಂದರು. ಹೀಗೆ ಪ್ರಾಣಿ ಪಕ್ಷಗಳ ಬಗ್ಗೆ, ಪರಿಸರದ ಬಗ್ಗೆಯೂ ಇವರಿಗೆ ಇರುವ ಕಾಳಜಿ ಮೆಚ್ಚುವಂತಹದ್ದು ಎಂದು ತಿಳಿಸಿದರು.

ಈ ವೇಳೆ ಡಾ.ಸಂತೋಷ ಪೂಜಾರ, ಡಾ.ಉಮರಉಸ್ಮಾನಗಣಿಹುಮನಾಬಾದ, ಡಾ.ರೋಹನ ರಾಠೋಡ, ಡಾ.ಶಶಿಕಾಂತ ಪೂಜಾರ ಹಾಗು ಸಮಾಜ ಸೇವಕರಾದ ಲಾಲಭಾಷಾ ಶಿವನಗುತ್ತಿ ಮಾತನಾಡಿದರು.

ಬಾಗಲಕೋಟೆ ಉಪ ಚುನಾವಣೆ ಗೆಲುವು ಕಾಂಗ್ರೆಸ್ ಕಾರ್ಯಕರ್ತರ ವಿಜಯೋತ್ಸವ



• **ಕನ್ನಡಪ್ರಭ ವಾರ್ತೆ** ಕಲಾದಗಿ

ಬಾಗಲಕೋಟೆ ವಿಧಾನಸಭಾ ಉಪ ಚುನಾಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ ಮೇಟಿಯವರು ಅಭೂತ ಪೂರ್ವ ಗೆಲುವು ಸಾಧಿಸಿದ ಹಿನ್ನಲೆ ಕಲಾದಗಿ ಬ್ಲಾಕ್ ಕಾಂಗ್ರೆಸ್ ಸಮಿತಿ ಪಧಾಧಿಕಾರಿಗಳು ಹಾಗೂ ಗ್ರಾಮದ ಹಾಗೂ ಸುತ್ತ ಮುತ್ತಲಿನ ಹಳ್ಳಿಗಳ ಕಾಂಗ್ರೆಸ್ ಕಾರ್ಯಕರ್ತರು ವಿಜ ಯೋತ್ಸವ ಆಚರಿಸಿದರು. ಗ್ರಾಮದ ಡಾ ಅಂಬೇಡ್ಕರ್‌ವೃತ್ತದ ಬಳಿ ಪಟಾಕಿ ಸಿಡಿಸಿ ಗುಲಾಲು ಎರಚಿ ವಿಜಯೋತ್ಸವ ಆಚರಿಸಿದರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಾ ಬಸವರಾಜ ಸಂಶಿ, ನಾಗಪ್ಪ ಗಾಣಿಗೇರ, ಶಿವಾನಂದ ಅರಕೇರಿ, ಗುರುಸಿದ್ದಪ್ಪ ಸಾರವಾಡ, ರಿಯಾಜ್ ಪೀರಜಾದೆ, ಶ್ರೀಧರ ಮಾದರ, ಬಸುರಾಜ ಬಿಲಕೇರಿ, ಅಂಜಲಿ ಬಾನು, ಮಕ್ತುಮ್ ಬಾವಾಖಾನ, ಅಕ್ರಂ ಸೌದಾಗಾರ್, ಮಲ್ಲಪ್ಪ ಜಮಖಂಡಿ, ಶ್ರೀಕಾಂತ ಪಾಟೀಲ, ಸಿಡ್ಲಪ್ಪ ಮಾದರ ಇನ್ನಿತರರು ಇದ್ದರು.

ಉಪನಯನ... | ಉಡುಪಿ ಪೇಜಾವರ ಅಧೋಕ್ಷಜ ಮಠದ ವಿಶ್ವಪ್ರಸನ್ನ ತೀರ್ಥರ ಅಭಿಮತ

ಸನಾತನ ಸಂಸ್ಕೃತಿಯ ಉಳಿವಿಗೆ ಶ್ರಮಿಸಿ

• **ಕನ್ನಡಪ್ರಭ ವಾರ್ತೆ** ಜಮಖಂಡಿ

ಸನಾತನ ಸಂಸ್ಕೃತಿಯ ಉಳಿವಿಗೆ ಪ್ರತಿಯೊಬ್ಬರು ಶ್ರಮಿಸಬೇಕು. ಮನೆಯಲ್ಲಿ ಮಕ್ಕಳಿಗೆ ಸಂಸ್ಕಾರ ನೀಡಬೇಕು ಎಂದು ಉಡುಪಿ ಪೇಜಾವರ ಅಧೋಕ್ಷಜ ಮಠದ ವಿಶ್ವಪ್ರಸನ್ನ ತೀರ್ಥರು ತಿಳಿಸಿದರು. ಸಾಮೂಹಿಕ ಉಪನಯನ ಕಾರ್ಯಕ್ರಮದಲ್ಲಿ ವಟುಗಳಿಗೆ ಬ್ರಹ್ಮೋಪದೇಶ ನೀಡಲು ಮಂಗಳವಾರ ನಗರಕ್ಕೆ ಆಗಮಿಸಿದ್ದ ಅವರು ಅನಂತರಾವ ಸಾಬಡೆ ಮೈದಾನ ಹೊಕ್ಕಳಭಾವಿ ಪ್ರದೇಶದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಪುರಾತನ ಋಷಿ ಮುನಿಗಳ ಹೆಸರು, ಗೋತ್ರ ಹೇಳುವಾಗ ಹೇಳುತ್ತೇವೆ. ಅವರು ಸಾವಿರಾರು ವರ್ಷಗಳ ತಪಸ್ಸನ್ನು ಆಚರಿಸಿ ಅದರ ಫಲವನ್ನು ನಮಗೆ ನೀಡಿದ್ದಾರೆ. ಅದರ ಋಣ ತೀರಿಸಲು ಗಾಯತ್ರಿ ಮಂತ್ರದ ಅನುಷ್ಠಾನ ಶಾಸ್ತ್ರಗಳ ಅಧ್ಯಯನ ನಿರಂತರವಾಗಿ ನಡೆಸಿ ಮುಂದಿನ ಪೀಳಿಗೆಗೆ ತಿಳಿಸಿ ಕೊಟ್ಟರೆ ಋಷಿಗಳ ಋಣ ತೀರಿಸಿದಂತಾಗುತ್ತದೆ ಎಂದು ತಿಳಿಸಿದರು. ಹೆಣ್ಮಕ್ಕಳಿಗೆ ಲಕ್ಷ್ಮೀ ಸೋಬಾನ ಪದ, ಹರಿಕಥಾಮೃತ ಸಾರ ಮುಂದಾವುಗಳ ಅಧ್ಯಯನ ಪಾರಾಯಣವನ್ನು ಶಾಸ್ತ್ರದಲ್ಲಿ ಹೇಳಲಾಗಿದೆ. ಗಂಡು ಮಕ್ಕಳಿಗೆ ಆತ್ಮ ಉದ್ಧಾರಕ್ಕಾಗಿ ವೇದಾಧ್ಯಯನ, ದೇಹ ಪೋಷಣೆಗೆ ಲೌಕಿಕ ವಿದ್ಯೆ ಎರಡನ್ನೂ ಚನ್ನಾಗಿ ಕಲಿತು ಸನಾತನ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕೆಲಸ ವಾಗಬೇಕು ಎಂದು ತಿಳಿಸಿದರು. ಸೂರ್ಯ ನಿಂದ ಹೊರ ಪ್ರಪಂಚದ ಕತ್ತಲು ದೂರವಾಗುತ್ತದೆ. ಒಳಗಿರುವ ಅಜ್ಞಾನ ಎಂಬ ಕತ್ತಲನ್ನು ಹೋಗಲಾಡಿಸಲು ಸೂರ್ಯ ನಾರಾಯಣನ ಕೃಪೆ ಬೇಕು ಅದಕ್ಕೆ ಗಾಯತ್ರಿ ಮಂತ್ರದ ನಿರಂತರ ಅನುಷ್ಠಾನ ನಡೆಯಬೇಕು ಎಂದು ತಿಳಿಸಿದರು. ಸನಾತನ ಸಂಸ್ಕೃತಿಯ ಬಗ್ಗೆ ತಿಳಿ ಪಡಿಸಲು ಶಿಬಿರಗಳನ್ನು ಏರ್ಪಡಿಸಬೇಕು ಪ್ರತಿಯೊಬ್ಬರೂ ಧರ್ಮಮಾರ್ಗದಲ್ಲಿರ ಬೇಕು ಎಂದು ಹೇಳಿದರು.



ರಾಜೇಂದ್ರ ಹುಲ್ಯಾಳಕರ ಪ್ರಾಸ್ತಾವಿಕವಾಗಿ ಮಾತನಾಡಿ, ಕಳೆದ 5 ವರ್ಷಗಳಿಂದ ಸಾಮೂಹಿಕ ಉಪನಯನ ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ.. ಸಮಾಜದವರ ಸಹಕಾರದಿಂದ ಈವರೆಗೆ ಸುಮಾರು 75ಕ್ಕೂ ಹೆಚ್ಚು ವಟುಗಳಿಗೆ ಉಪನಯನ ಮಾಡಿಸಿ, ಯತಿಗಳಿಂದ ಅನುಗ್ರಹ, ಬ್ರಹ್ಮೋಪದೇಶ ಮಾಡಿಸಲಾಗಿದೆ. ಈ ಬಾರಿ 20 ವಟುಗಳಿಗೆ ಉಪನಯನ ನಡೆಯಲಿದೆ ಎಂದು ತಿಳಿಸಿದರು.

ವಿದ್ಯಾರ್ಥಿ ಅಕ್ಷಯ ಮಾತನಾಡಿ, ಶ್ರೀಮಠದಿಂದ ಹಾವೇರಿ ಜಿಲ್ಲೆಯ ಕರಜಗಿ ಗ್ರಾಮದಲ್ಲಿ ವಿಶ್ವೇಶತೀರ್ಥ ಗುರುಕುಲ ಪ್ರಾರಂಭಿಸಲಾಗಿದ್ದು ಆಸಕ್ತರು ತಮ್ಮ ಮಕ್ಕಳನ್ನು ವೇದ, ಶಾಸ್ತ್ರಗಳ ಅಧ್ಯಯನಕ್ಕೆ ಕಳುಹಿಸಿ ಕೊಡಬಹುದು ಎಂದು ತಿಳಿಸಿದರು.

ವಿದ್ಯಾರ್ಥಿಗಳು ವೇದಘೋಷ ಮಾಡಿದರು. ಶುಭಶ್ರೀ ತಂಡದವರು ಪ್ರಾರ್ಥನಾ ಗೀತೆ ಹಾಡಿದರು. ಮೈಗೂರ ಆಚಾರ ಅನಿಸಿಕೆ ಹಂಚಿ ಕೊಂಡರು. ಎಸ್.ಎಲ್ ಕುಲಕರ್ಣಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಪ್ರವೀಣ ಕುಲಕರ್ಣಿ ವಂದಿಸಿದರು.

ಪಿಎಂಜೆಜೆಬಿವೈ, ಪಿಎಂಎಸ್ಬಿವೈ ಯೋಜನೆಯಡಿ ನೋಂದಣಿ

ಬಾಗಲಕೋಟೆ: ಪ್ರಸಕ್ತ ಸಾಲಿನಲ್ಲಿ ನೇಕಾರ ಸಮ್ಮಾನ್ (ಕೈಮಗ್ಗ) ಯೋಜನೆಯಡಿ ನೋಂದಾಯಿತ ಜಿಲ್ಲೆಯ ಕೈಮಗ್ಗ ನೇಕಾರರು ಕಡ್ಡಾಯವಾಗಿ ಪ್ರಧಾನಮಂತ್ರಿ ಜೀವನ್ ಜ್ಯೋತಿ ಭಿಮಾ ಯೋಜನೆ (ಪಿಎಂಜೆಜೆಬಿವೈ) ಮತ್ತು ಪ್ರಧಾನಮಂತ್ರಿ ಸುರಕ್ಷಾ ಭೀಮಾ ಯೋಜನೆಯಡಿ(ಪಿಎಂಎಸ್ಬಿವೈ) ನೋಂದಾಯಿಸಿಕೊಳ್ಳಬೇಕು. ನೋಂದಾಯಿಸಿಕೊಂಡ ಬಗ್ಗೆ ಬ್ಯಾಂಕಿನಿಂದ ದೃಢೀಕರಣ ಪಡೆದು ಕೈಮಗ್ಗ ಮತ್ತು ಜವಳಿ ಇಲಾಖೆ, ಬಾಗಲಕೋಟೆ ಕಚೇರಿಗೆ ಮಾಹಿತಿಯನ್ನು ಸಲ್ಲಿಸಬೇಕು. ಈ ಯೋಜನೆಯಡಿ ನೋಂದಣಿ ಮಾಡಿಕೊಂಡ ನೇಕಾರರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ವಿಮಾ ಕಂತಿನ ಮೊತ್ತವನ್ನು 2026-27ನೇ ಸಾಲಿನ ಆರ್ಥಿಕ ವರ್ಷದ ಕೊನೆಯಲ್ಲಿ ಪರುಪಾವತಿಸಲಾಗುತ್ತದೆ. ಮಾಹಿತಿಗಾಗಿ ದೂ.08354-235463ಗೆ ಸಂಪರ್ಕಿಸಿ.

ಬಿವಿಎ ಕೋರ್ಸ್‌ಗೆ ಅರ್ಜಿ ಆಹ್ವಾನ

ಬಾಗಲಕೋಟೆ: ಮೈಸೂರಿನ ದೃಶ್ಯಕಲಾ ಕಾಲೇಜಿನಲ್ಲಿ ಪ್ರಸಕ್ತ ಸಾಲಿಗೆ ಬ್ಯಾಚುರಲ್ ಆಫ್ ವಿಜ್ಯುಯಲ್ ಆರ್ಟ್ಸ್ (4 ವರ್ಷ) ಪ್ರಥಮ ವರ್ಷದ ಸ್ನಾತಕೋತ್ತರ ಪ್ರವೇಶಕ್ಕಾಗಿ ಪಿಯುಸಿಯಲ್ಲಿ ಉತ್ತೀರ್ಣರಾದ ಹಾಗೂ ಪಿಯುಸಿಗೆ ಸಮಾಂತರವಾದ ಕೋರ್ಸ್ ಮಾಡಿರುವ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅಂತರ್ಜಾಲ ಮೂಲಕ ಮೇ 30 ರೊಳಗಾಗಿ ಅರ್ಜಿ ಸಲ್ಲಸಬಹುದಾಗಿದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಪ್ರವೇಶಾತಿಗಾಗಿ ಅರ್ಹತಾ ಪರೀಕ್ಷೆಯ ದಿನಾಂಕ ಮತ್ತು ಸಂದರ್ಶನದ ದಿನಾಂಕದ ಮಾಹಿತಿಯನ್ನು ಪ್ರತ್ಯೇಕವಾಗಿ ತಿಳಿಸಲಾಗುತ್ತದೆ. ಮಾಹಿತಿಗಾಗಿ ದೂ.0821-2438931ಗೆ ಸಂಪರ್ಕಿಸಿ.

ಕಾಂಗ್ರೆಸ್‌ನ ಗೆಲುವು ನೈತಿಕ ಗೆಲುವಲ್ಲ, ಅನೈತಿಕ ಗೆಲುವು

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರ ದುರ್ಬಳಕೆ ಮತ್ತು ಹಣಬಲ ಮೂಲಕ ಅನೈತಿಕ ಗೆಲುವು ಸಾಧಿಸಿದೆ. ಇದರಿಂದ ಬಿಜೆಪಿ ಕಾರ್ಯಕರ್ತರು ಎದೆಗುಂದಿಲ್ಲ ಎಂದು ಬಿಜೆಪಿ ಅಭ್ಯರ್ಥಿಯಾಗಿದ್ದ ಡಾ.ವೀರಣ್ಣ ಚರಂತಿಮಠ ಪ್ರತಿಕ್ರಿಯಿಸಿದ್ದಾರೆ.



ಒಂದು ಕ್ಷೇತ್ರದ ಉಪಚುನಾವಣೆ ಗೆಲ್ಲಲು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ, ಇಡೀ ಸಚಿವ ಸಂಪುಟದೊಂದಿಗೆ ಠಿಕಾಣಿ ಹೂಡಿದ್ದರು. ಆಡಳಿತ ವಿರೋಧಿ ಅಲೆಗೆ ಸರಕಾರ ಬೆಚ್ಚಿ ಬಿದ್ದಿತ್ತು ಎಂಬುದಕ್ಕೆ ಸಾಕ್ಷಿಯಾಗಿತ್ತು, ಈ ಸರಕಾರ ಕಳೆದ 3 ವರ್ಷಗಳಲ್ಲಿ ರಾಜ್ಯದ ಜನತೆಯ ಹಾಗೂ ಕೃಷ್ಣಾ ಯೋಜನೆ ಸಂತ್ರಸ್ತರ ಒಂದು ಸಮಸ್ಯೆಯನ್ನೂ ಆಲಿಸಲಿಲ್ಲ. ಮೊತ್ತೊಂದೆಡೆ ಕಾಂಗ್ರೆಸ್ಸಿಗೆ ಮತ ಹಾಕದಿದ್ದರೆ ಗ್ಯಾರಂಟಿ ಯೋಜನೆಗಳನ್ನು ಸ್ಥಗಿತಗೊಳಿಸುವುದಾಗಿ ಮತದಾರರಿಗೆ ಬೇದರಿಕೆ ಹಾಕಿದ್ದರು. ಚುನಾವಣೆ ಪೂರ್ವದಲ್ಲಿ ಮತದಾರರ ಮೇಲೆ ಪ್ರಭಾವ ಬಿರುವುದಕ್ಕಾಗಿ ಗ್ಯಾರಂಟಿ ಯೋಜನೆಗಳ ಅನುದಾನ ಬಿಡುಗಡೆಗೊಳಿಸುವ ಮೂಲಕ ಮತದಾರರ ಮೇಲೆ ಪ್ರಭಾವ ಬೀರಿದರು. ಕಾಂಗ್ರೆಸ್ಸಿನ ಈ ಎಲ್ಲ ಕುತಂತ್ರ ಗಮನಿಸಿದರೆ ಕಾಂಗ್ರೆಸ್ ಪಕ್ಷ ಹಾಗೂ ಸರಕಾರ ಉಪ ಚುನಾವಣೆ ಎದರಿಸಲು ಅಧಿರವಾಗಿತ್ತು ಎಂಬುದನ್ನು ದೃಢಪಡಿಸುತ್ತದೆ ಎಂದು ಹರಿಹಾಯ್ದರು.

ಒಂದು ಕ್ಷೇತ್ರ ಗೆಲ್ಲುವುದಕ್ಕಾಗಿ ಇಡಿ ಸರಕಾರವೇ ಬಾಗಲಕೋಟೆಯಲ್ಲಿ ಬೀಡು ಬಿಟ್ಟಿತ್ತು. ಹಾಗಾಗಿ ಅಧಿಕಾರದ ದುರ್ಬಳಕೆ, ಹಣಬಲ ಹಾಗೂ ಜಾತಿ ರಾಜಕಾರಣದಂತಹ ಕುತಂತ್ರಗಳ ಮೂಲಕ ಕಾಂಗ್ರೆಸ್ ಅನೈತಿಕ ಗೆಲುವು ಸಾಧಿಸಿದೆ. ಬಿಜೆಪಿ ಸರಕಾರ ಮಾಡಿರುವ ಸಾಧನೆ ಕ್ಷೇತ್ರದಲ್ಲಿ 3 ಬಾರಿ ಶಾಸಕನಾಗಿ ಮಾಡಿರುವ ಅಭಿವೃದ್ಧಿ ಕೆಲಸ ಮುಂದಿಟ್ಟುಕೊಂಡು ಚುನಾವಣೆ ಎದುರಿಸಿ ಬಿಜೆಪಿ ಕಾರ್ಯಕರ್ತರು ನೈತಿಕ ವಿಜಯ ಸಾಧಿಸಿದ್ದಾರೆ. ಹಾಗಾಗಿ ಕಾರ್ಯಕರ್ತರು ನೈತಿಕವಾಗಿ ಕುಗ್ಗದೆ ಮುಂಬರುವ ಸ್ಥಳೀಯ ಚುನಾವಣೆಗಳ ಮೂಲಕ ಕಾಂಗ್ರೆಸ್ ಕುತಂತ್ರಗಳಿಗೆ ಮತದಾರರು ಮತ್ತು ಪಕ್ಷದ ಕಾರ್ಯಕರ್ತರು ತಕ್ಕ ಉತ್ತರ ನೀಡಲಿದ್ದಾರೆ. ಹಿಂದಿನ ಚುನಾವಣೆಗಿಂತ ಈ ಉಪ ಚುನಾವಣೆಯಲ್ಲಿ ಹೆಚ್ಚಿನ ಮತನೀಡಿದ ಕ್ಷೇತ್ರದ ಎಲ್ಲ ಮತದಾರರು ಹಾಗೂ ನನ್ನ ಪರವಾಗಿ ಪ್ರಚಾರ ಮೂಲಕ ಮತಯಾಚನೆಗೆ ಆಗಮಿಸಿದ್ದ ಪಕ್ಷದ ರಾಜ್ಯ ಎಲ್ಲ ವರಿಷ್ಠರು, ಜಿಲ್ಲೆಯ ಎಲ್ಲ ನಾಯಕರು ಹಾಗೂ ಪಕ್ಷದ ಕಾರ್ಯಕರ್ತರಿಗೂ ಕೃತಜ್ಞತೆ ಸಲ್ಲಿಸಿದ್ದಾರೆ.

ಮತದಾರರಿಗೆ ಕೃತಜ್ಞತೆ

ಬಾಗಲಕೋಟೆ ಉಪಚುನಾವಣೆಯಲ್ಲಿ ಬಿಜೆಪಿಗೆ ಮತ ನೀಡಿದ ಮತದಾರರಿಗೆ ಹಾಗೂ ಶ್ರಮಿಸಿದ ಕಾರ್ಯಕರ್ತರಿಗೆ, ಮುಖಂಡರುಗಳಿಗೆ ಹೃತ್ಪೂರ್ವಕ ಧನ್ಯವಾದ ತಿಳಿಸಿದ ಮಾಜಿ ಶಾಸಕ ವೀರಣ್ಣ ಚರಂತಿಮಠ ಅವರು, ಸೋಲು-ಗೆಲುವು ರಾಜಕೀಯದಲ್ಲಿ ಸಹಜವಾದ ಪ್ರಕ್ರಿಯೆ. ಸೋಲನ್ನು ಸವಾಲಾಗಿ ಸ್ವೀಕರಿಸಿ ಕುಗ್ಗದೆ ಮುಂದಿನ ದಿನಗಳಲ್ಲಿ ಪಕ್ಷ ಸಂಘಟನೆಗೆ ಹೊಸ ಛಲದಿಂದ ದುಡಿಯೋಣ, ಮತ್ತೆ ಬಿಜೆಪಿಯನ್ನು ಅಧಿಕಾರಕ್ಕೆ ತಂದು ಅಭಿವೃದ್ಧಿಯ ಹೊಸ ಅಧ್ಯಾಯ ಬರೆಯೋಣ ಎಂದು ತಿಳಿದ್ದಾರೆ.

ಯುವ ಕವಿಗಳಿಗೆ ಮಾರ್ಗದರ್ಶನ ಕೊರತೆ: ಸಾಹಿತಿ ಡಾ.ಕೆಂಧೂಳಿ



• **ಕನ್ನಡಪ್ರಭ ವಾರ್ತೆ** ರಬಕವಿ-ಬನಹಟ್ಟಿ

ಕವಿ ಎಷ್ಟೇ ಎತ್ತರಕ್ಕೇರಲಿ, ಕೇಳುವ ಕಿವಿಗಳಿದ್ದರೆ ಮಾತ್ರ ಕವಿಯು ತನ್ನ ಶ್ರೇಷ್ಠತೆಯನ್ನು ಪಡೆದುಕೊಳ್ಳುತ್ತಾನೆಂದು ಯುವ ಜಾನಪದ ಸಾಹಿತಿ ಡಾ.ಶ್ರೀಕಾಂತ ಕೆಂಧೂಳಿ ಹೇಳಿದರು.

ಬನಹಟ್ಟಿಯ ಶಂಕರಲಿಂಗ ದೇವಸ್ಥಾನದಲ್ಲಿ ಶುಕ್ರವಾರ ಗಜಾನನ ಉತ್ಸವ ಸಮಿತಿಯಿಂದ ಗೌರವ ಡಾಕ್ಟರೇಟ್ ಪದವಿಗೆ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಇಂದಿನ ಯುವ ಕವಿಗಳು ಹಿರಿಯ ಕವಿಗಳಿಂದ ಅಪೇಕ್ಷಿಸಿದ ಪ್ರೋತ್ಸಾಹ, ಮಾರ್ಗದರ್ಶನ, ಪ್ರೀತಿ ಮತ್ತು ವಾತ್ಸಲ್ಯದಿಂದ ವಂಚಿತರಾಗುತ್ತಿದ್ದಾರೆಂದು ಕಳವಳ ವ್ಯಕ್ತಪಡಿಸಿದರು.

ಹಿಂದಿನ ಕಾಲದಲ್ಲಿ ಯುವಕವಿಗಳಿಗೆ ಸೂಕ್ತ ಮಾರ್ಗದರ್ಶನ ಸಿಗುತ್ತಿತ್ತು. ತಪ್ಪುಗಳು ನಡೆದ ಸಂದರ್ಭದಲ್ಲಿ ಹಿರಿಯ ಕವಿಗಳು ತಿದ್ದುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿ ಇದಕ್ಕಿಂತ ವಿಭಿನ್ನವಾಗಿದೆ. ಯುವ ಕವಿಗಳಿಗೆ ಮಾರ್ಗದರ್ಶನದ ಕೊರತೆ ಕಾಡುತ್ತಿದೆ. ಇದನ್ನು ನೀಗಿಸಲು ಹಿರಿಯ ಕವಿಗಳು ಸ್ವಾರ್ಥತೆ ಮರೆತು ವಿಶಾಲ ಮನಸ್ಸಿಗರಾಗಿ ಗುರುತರ ಜವಾಬ್ದಾರಿ ನಿರ್ವಹಿಸಬೇಕು ಎಂದರು.

ಮಲ್ಲಣ್ಣ ಬಾವಲತ್ತಿ, ಡಾ.ಶ್ರೀನಾಥ ಖಮಿತ್ಕರ, ಮಲ್ಲಿಕಾರ್ಜುನ ತುಂಗಳ, ಗಂಗಯ್ಯ ಹಿರೇಮಠ, ರವಿ ಭೂತಿ, ಬಸವರಾಜ ಅಮಟಿ, ಬಸವರಾಜ ಬೆಳಗಲಿ, ಶಂಕರ ಜುಂಜಪ್ಪನವರ, ಈರಣ್ಣ ಶಿರಹಟ್ಟಿ, ಮಲ್ಲಣ್ಣ ಕೊಣ್ಣೂರ, ರಾಜು ಸಗರಿ, ವಿಜಯ ಜವಳಗಿ, ನಿಂಗಯ್ಯ ಮುಧೋಳಮಠ, ಬಾಲಚಂದ್ರ ಕರ, ಸೋಮು ಬೀಳಗಿ ಸೇರಿ ಅನೇಕರಿದ್ದರು.

ಕೇಂದ್ರ ನೀತಿ ಆಯೋಗ ಶಾಶ್ವತ ಸದಸ್ಯರಾಗಿ ಡಾ.ಬಾಲಸುಬ್ರಮಣ್ಯಂ ನೇಮಕಕ್ಕೆ ಹರ್ಷ



2025ರಲ್ಲಿ ಬಿವಿವಿ ಸಂಘದ ಫಿಜಿಯೋಥೆರಪಿ ಮತ್ತು ವಾಕ್-ಶ್ರವಣ ಕಾಲೇಜುಗಳ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ್ದ ಡಾ. ಆರ್. ಬಾಲಸುಬ್ರಮಣ್ಯಂ ಅವರನ್ನು ಸನ್ಮಾನಿಸಲಾಗಿತ್ತು.

• **ಕನ್ನಡಪ್ರಭ ವಾರ್ತೆ** ಬಾಗಲಕೋಟೆ

ಕೇಂದ್ರ ಸರ್ಕಾರದ ಸಾಮರ್ಥ್ಯ ಆಯೋಗದ ಸದಸ್ಯರಾಗಿದ್ದ ವೈದ್ಯರು, ಲೇಖಕರು, ಸಂಶೋಧಕರು, ಅಭಿವೃದ್ಧಿ ಕಾರ್ಯಕರ್ತರು ಆದ ಡಾ.ಆರ್. ಬಾಲಸುಬ್ರಮಣ್ಯಂ ಅವರು ಕೇಂದ್ರ ಸರ್ಕಾರದ ನೀತಿ ಆಯೋಗದ ಶಾಶ್ವತ ಸದಸ್ಯರಾಗಿ ನೇಮಕವಾಗಿದ್ದಕ್ಕೆ ಬಿವಿವಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಹರ್ಷ ವ್ಯಕ್ತಪಡಿಸಿದ್ದಾರೆ.

ಡಾ. ಬಾಲಸುಬ್ರಮಣ್ಯಂ ಅವರು ಕರ್ನಾಟಕದವರಾಗಿದ್ದು, ಸ್ವಾಮಿ ವಿವೇಕಾನಂದ ಯೂತ್ ಮೂವಮೆಂಟ್ ಮತ್ತು ಗ್ರಾಮ ಸಂಸ್ಥೆಗಳನ್ನು ಸ್ಥಾಪಿಸಿ ಅನೇಕ ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಕೇಂದ್ರ ಸರ್ಕಾರದ ಸಾಮರ್ಥ್ಯ ಆಯೋಗದ ಸದಸ್ಯರಾಗಿಯೂ ರಾಷ್ಟ್ರದ ಅಭಿವೃದ್ಧಿಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ.

ಶ್ರೀಯುತರ ಅಪಾರ ಅನುಭವ, ಕಾರ್ಯಕ್ಷಮತೆ ಮತ್ತು ಬೌದ್ಧಿಕ ಸಾಮರ್ಥ್ಯ ಗುರುತಿಸಿ ಪ್ರಧಾನಿ ನರೇಂದ್ರ ಮೋದಿ ಅವರು ತಾವು ಅಧ್ಯಕ್ಷರಾಗಿರುವ ನೀತಿ ಆಯೋಗದ ಸದಸ್ಯರಾಗಿ ನೇಮಕ ಮಾಡಿದ್ದು, ನೀತಿ ಆಯೋಗ ರಾಷ್ಟ್ರದ ಪ್ರಗತಿ ಕಾರ್ಯಗಳ ದಿಕ್ಸೂಚಿಯಾಗಿದೆ. ಬಾಲಸುಬ್ರಮಣ್ಯಂ ಅವರು ತಮ್ಮ ಅಮೂಲ್ಯ ಸಲಹೆಗಳನ್ನು ದೇಶದ ಅಭಿವೃದ್ಧಿಗೆ ನೀಡಲಿದ್ದಾರೆ. ಅಪ್ಪಟ ಕನ್ನಡಿಗರೊಬ್ಬರು ಈ ಉನ್ನತ ಸ್ಥಾನ ಅಲಂಕರಿಸಿರುವುದು ಕನ್ನಡಿಗರೆಲ್ಲರೂ ಹೆಮ್ಮೆಪಡುವಂತಹ ಗೌರವವಿದು ಎಂದು ಡಾ.ವೀರಣ್ಣ ಚರಂತಿಮಠ ಹೇಳಿದ್ದಾರೆ.

ಇದೇ ವೇಳೆ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ (ಬೇವೂರ) ಮಾತನಾಡಿ, ಡಾ.ಬಾಲಸುಬ್ರಮಣ್ಯಂ ಅವರು ಅಕ್ಟೋಬರ್ 2025ರಲ್ಲಿ ಬಿವಿವಿ ಸಂಘದ ಫಿಜಿಯೋಥೆರಪಿ ಮತ್ತು ವಾಕ್-ಶ್ರವಣ ಕಾಲೇಜುಗಳ ಉದ್ಘಾಟನಾ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿ ಇಲ್ಲಿನ ಶೈಕ್ಷಣಿಕ ಚಟುವಟಿಕೆ ಮೆಚ್ಚಿ ಹೃದಯದಲ್ಲಿ ಜ್ಞಾನ ದೀಪ ಬೆಳಗುವ ಬಿವಿವಿ ಸಂಘ ಎಂದು ಶ್ಲಾಘಿಸಿದ್ದನ್ನು ಸ್ಮರಿಸಿಕೊಂಡರು. ನೀತಿ ಆಯೋಗದ ಸದಸ್ಯರಾಗಿ ಅವರ ಕಾರ್ಯದಕ್ಷತೆಯಿಂದ ದೇಶ ಅಭಿವೃದ್ಧಿ ಪಥದತ್ತ ಹೆಜ್ಜೆ ಹಾಕಲಿ. ಇದು ಕನ್ನಡಿಗರೆಲ್ಲ ಸಂಭ್ರಮಿಸಬೇಕಾದ ಮಹಾ ಸುದಿನ ಎಂದು ಹೇಳಿದರು.



ಬಾಗಲಕೋಟೆ ವಿಧಾನಸಭೆ ಉಪ ಚುನಾವಣೆಯಲ್ಲಿ ಆಯ್ಕೆಯಾದ ಉಮೇಶ್ ಮೇಟಿ ಮಂಗಳವಾರ ಸಿಎಂ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನಲ್ಲಿ ಅವರ ಸ್ವಗೃಹದಲ್ಲಿ ಭೇಟಿಯಾಗಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಮೇಶ್ ಮೇಟಿ ಅವರನ್ನು ಅಭಿನಂದಿಸಿ ಶುಭ ಹಾರೈಸಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಮಲ್ಲಿಕಾರ್ಜುನ ಮೇಟಿ ಹಾಗೂ ಬಾಗಲಕೋಟೆಯ ಯುವ ಮುಖಂಡ ಹೊಳಬಸು ಶೆಟ್ಟರ್ ಇದ್ದರು.

ಬೆಂಬಲ ಬೆಲೆ ಖರೀದಿ ಕೇಂದ್ರದ ತೂಕದಲ್ಲಿ ಮೋಸ: ಆರೋಪ



• **ಕನ್ನಡಪ್ರಭ ವಾರ್ತೆ** ಹುನಗುಂದ

ಸರ್ಕಾರದಿಂದ ಬೆಂಬಲ ಬೆಲೆಯಡಿ ಕಡಲೆ ಕಾಳು ಖರೀದಿ ಕೇಂದ್ರದಲ್ಲಿ ತೂಕದಲ್ಲಿ ಮೋಸ ಮಾಡಲಾಗುತ್ತಿದೆ ಎಂದು ಆರೋಪಿಸಿ ರೈತ ಸಂಘದ ಪದಾಧಿಕಾರಿಗಳು ಎಪಿಎಂಸಿ ಕಾರ್ಯದರ್ಶಿ ಆರ್.ಎಂ. ದಂಡಿನ ಅವರಿಗೆ ಮಂಗಳವಾರ ಮನವಿ ನೀಡಿದರು.

ರೈತ ಸಂಘದ ಮುಖಂಡ ರಸೂಲಸಾಬ ತಹಸೀಲ್ದಾರ ಮಾತನಾಡಿ, ಕಡಲೆ ಖರೀದಿ ಕೇಂದ್ರದಲ್ಲಿ 50 ಕೆಜಿ ಚೀಲಕ್ಕೆ 600 ಗ್ರಾಂ ಹೆಚ್ಚಿಗೆ ಕಾಳು ಸೂಟ್ ಮಾತ್ರ ಪಡೆಯಬೇಕು. ಆದರೆ ಇಲ್ಲಿ 1 ಕೆಜಿಗೂ ಅಧಿಕ ಕಾಳು ಪಡೆಯುತ್ತಿದ್ದಾರೆ. ಸ್ಯಾಂಪಲ್ ನೆಪದಲ್ಲಿ 5 ರಿಂದ 10 ಕೆಜಿ ತೆಗೆದುಕೊಳ್ಳುತ್ತಿದ್ದಾರೆ. ಕೇಂದ್ರ ಸರ್ಕಾರದ ಎಂ.ಆರ್.ಪಿ ಬೆಲೆಯೂ ಪಾಲನೆಯಾಗುತ್ತಿಲ್ಲ. ಖರೀದಿ ಕೇಂದ್ರದಲ್ಲಿನ ಹಮಾಲರು ಒಬ್ಬ ರೈತರಿಂದ ₹40 ರಿಂದ ₹50 ಹಣಪಡೆಯುತ್ತಿದ್ದಾರೆ. ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಕೂಡಲೇ ಅಧಿಕಾರಿಗಳು ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸಬೇಕು. ಇಲ್ಲವಾದರೆ ಮುಂದಿನ ದಿನಗಳಲ್ಲಿ ರೈತರಿಂದ ಉಗ್ರ ಹೋರಾಟ ಮಾಡಲಾಗುವುದು ಎಂದು ತಿಳಿಸಿದರು.

ರೈತರಾದ ಎಸ್.ಬಿ. ಪೈಲ, ವೀರನಗೌಡ ಪಾಟೀಲ, ಮಹಾಂತೇಶ ಐಹೋಳೆ ಬಸನಗೌಡ ಪೈಲ, ಬಸವರಾಜ ಮುರನಾಳ, ವಿ.ಬಿ. ನಾಗೂರ, ರಮೇಶ ಕಡಪಟ್ಟಿ ಸೇರಿದಂತೆ ಇತರರು ಇದ್ದರು.